ಹಿತ್ತಲ ಗಿಡ

ಚಾತುರ್ಮಾಸಿಕ

ರೈತ,ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಪೈರು 11, ಕೊಯಿಲು 1, ಜನವರಿ - ಏಪ್ರಿಲ್, 2005

ಕೃಷಿ ಬ್ರಹ್ಮಾಂಡದ ಡಾ. ರುದ್ರಾರಾಧ್ಯ



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿ ಬೀ ಬಳಗ

Honey Bee (*English*)
Prof. Anil K.Gupta, Indian Institute of Management, Vastrapur, Ahmedabad - 380 015, Ph: 079-26307241
email: anilg@nifindia.org, honeybee@sristi.org

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8, Bhubaneswar - 751 012, Orissa, balaram_sahu@hotmail.com

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra, Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

&

Hittalagida *(Kannada)*

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), Ahmedabad & **NIF** (National Innovation Foundation, India), New Delhi

ಸಂಪಾದಕೀಯ

★ ಆಂಧ್ರದಲ್ಲಿ ಬಿಟಿ ಹತ್ತಿ ಕೃಷಿಗೆ ಈ ಸಾಲಿನಲ್ಲಿ ಅನುಮತಿ ದೊರೆತಿಲ್ಲ. ಜಾಗತೀಕರಣ ಉದಾರೀಕರಣಗಳ ಕರಾಳ ಛಾಯೆಗಳಡಿಯಲ್ಲಿ ವಿಶ್ವಬ್ಯಾಂಕ್, ಐಎಂಎಫ್ ಮತ್ತು ವಿಶ್ವವಾಣಿಜ್ಯ ಸಂಸ್ಥೆಗಳು ನಡೆಸುತ್ತಿರುವ ಹುನ್ನಾರಗಳಿಗೆ ಸ್ವಲ್ಪ ತಡೆ ಬೀಳುವಂತಾಗಿರುತ್ತದೆ. ಮಿತ್ರ ಪಿ.ವಿ. ಸತೀಶ್ ನೇತೃತ್ವದಲ್ಲಿ ಆಂಧ್ರದ ಡಿಡಿಎಸ್ ನಡೆಸಿರುವ ಹೋರಾಟಕ್ಕೆ ಇದರಿಂದ ಜಯ ದೊರೆತಂತಾಗಿದೆ.

★ ನೆಮ್ಮದಿಯ ನಿಟ್ಟುಸಿರು ಬಿಡುವಾಗಲೇ ಇತ್ತೀಚೆಗಿನ "ಕೃಷಿ ಉತ್ಪನ್ನ ಮಾರಾಟ ಸಮಿತಿ (APMC) ಕಾಯಿದೆ" ಯನ್ನು ವಿಕೃತಗೊಳಿಸುವ ಪ್ರಯತ್ನ, 'ಬೀಜ ಮಸೂದೆ- *2005*" ಮತ್ತು ಜೈವಿಕ ತಂತ್ರಜ್ಞಾನ ನೀತಿಗಳಲ್ಲಿನ ರೈತ ವಿರೋಧಿ ನಿಲುವುಗಳು ತೀವ್ರ ಆತಂಕಕ್ಕೆ ಎಡೆಮಾಡಿಕೊಡುತ್ತಲಿವೆ. ಹಾಗಾಗಿ, ಆಂಧ್ರದ ಈ ಜಯ ಕ್ಷಣಿಕವೋ ಎನ್ನುವ ಸಂಶಯ ಕಾಡುತ್ತಿದೆ.

★ ಕೃಷಿ ವಿಜ್ಞಾನಿಗಳು ರೈತರ ಪರವಾಗಿರುವ ಬಗ್ಗೆ, ಸಂಶಯ ಮತ್ತು ಟೀಕೆಗಳು ಸದಾ ಕೇಳಿ ಬರುತ್ತಿವೆ. ಇದಕ್ಕೆ ದಿಟ್ಟ ಉತ್ತರವಾಗಿ ಬಾವಿಕೆರೆ ಕೃಷಿ ಸಂಶೋಧನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ರುದ್ರಾರಾಧ್ಯ, ಜಲಾನಯನ ಅಭಿವೃದ್ಧಿಯ ಮೂಲಕ ಒಂದು ಸಾವಯವ ಸಮಗ್ರ ಸ್ವಾವಲಂಬಿ ಕೃಷಿ ಮಾದರಿಯನ್ನು ತಯಾರಿಸಿರುವುದು ಮಾತ್ರವಲ್ಲ ಪ್ರತ್ಯಕ್ಷವಾಗಿ ಇದನ್ನು ಸಾಕಾರಗೊಳಿಸಿಯೂ ತೋರಿಸಿರುವರು. ಇವರು 'ಹಿತ್ತಲಗಿಡ' ದ ವಿಶೇಷ ಪ್ರಶಂಸೆಗೆ ಅರ್ಹರಾಗಿರುವರು.

★ ಅಡಿಕೆ ಹಾಳೆ ತಟ್ಟೆಯಂತಹ ಅಪ್ಪಟ ದೇಶೀಯ ಉದ್ಯಮದಿಂದ ಹೇಗೆ ಗೌರವಯುತ ಜೀವನಕ್ಕೆ ಅಗತ್ಯ ಆದಾಯವನ್ನು ಗಳಿಸಬಹುದೆಂಬುದನ್ನು ಶಿರಸಿಯ ಹೆಗಡೆದ್ವಯರು ಸಾಧಿಸಿ ತೋರಿಸಿರುವರು. ಇದು ಆತಂಕದಲ್ಲಿರುವ ಅಡಿಕೆ ಕೃಷಿಕರನ್ನು ಪರ್ಯಾಯಗಳತ್ತ ಗಮನಹರಿಸುವಂತೆ ಮಾಡಲು ಪ್ರೇರೇಪಿಸಬೇಕಾಗಿದೆ.

★ ಕೃಷಿ ಸಂಸ್ಕೃತಿಯನ್ನು ಗಟ್ಟಿಮಾಡುವ ನೆಲಮಂಗಲದ ಜಯರಾಂ ನಡೆಸಿದ 'ಬೆಳದಿಂಗಳ ಹಬ್ಬ' ನಮ್ಮ ಗ್ರಾಮಾಂತರ ಬದುಕು ವಿದೇಶೀ ವಿಲಾಸಿ ಸಂಸ್ಕೃತಿಯತ್ತ ವಾಲುವುದಕ್ಕೆ ತಡೆಹಾಕಬಹುದಾಗಿದೆ. ಹಾಗೆಯೇ, ಬರ, ಬೆಳೆ ಹಾನಿ, ಬೆಲೆ ಇಳಿತ ಇತ್ಯಾದಿ ತೀವ್ರ ಸಂಕಷ್ಟ ತಾಳಲಾರದೆ ಸಾಮೂಹಿಕವಾಗಿ ಆತ್ಮಹತ್ಯೆಯ ಸನ್ನಿಗೆ ಒಳಗಾಗುತ್ತಿರುವ ನಮ್ಮ ರೈತ ಸಮುದಾಯಕ್ಕೆ ಈ ಬೆಳದಿಂಗಳ ಹಬ್ಬದಂತಹ ದೇಶೀಯ ಆಚರಣೆಗಳು ಚೈತನ್ಯ ನೀಡಬಹುದಾಗಿವೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

''ಬಿಟಿ'' ಹತ್ತಿ ತಳಿಗೆ ಆಂಧ್ರದಲ್ಲಿ ವಿದಾಯ

'ಬಿಟಿ'(*Bacillus thuringiensis*) ಹತ್ತಿತಳಿ 'ಕಾಯಿಕೊರಕ' (boll worm)ದ ನಿಯಂತ್ರಣದ ಒಂದು ಕೀಟನಾಶಕ ಅಂಶವನ್ನು ತನ್ನ ದೇಹದೊಳಗೇ ತುಂಬಿಕೊಂಡಿರುವಂತಹದ್ದು. ಇದು ಜೈವಿಕ ತಂತ್ರಜ್ಞಾನ ಮುಖೇನ ನಡೆದ ಒಂದು ಅದ್ಭುತ ಆವಿಷ್ಕಾರದ ಪರಿಣಾಮವಾಗಿ ಹೊರಬಂದಿದ್ದು ಕಾಯಿಕೊರಕಕ್ಕೆ ಸಿದ್ಧೌಷದವೆಂದು ಸಾರಿ ಹೇಳಲಾಗುತ್ತಿದೆ. ವಿದೇಶೀ ಮೊನ್ಸಾಂಟೊ ಮತ್ತು ದೇಶೀಯ ಮಹಿಕೊ ಕಂಪೆನಿಗಳು ಜೊತೆ ಸೇರಿ ಹೊರ ತಂದಿರುವ ಈ 'ಬಿಟಿ' ಹತ್ತಿ ತಳಿಯ ಕೃಷಿ, ದೇಶದಲ್ಲಿ ಈಗ ನಾಲ್ಕನೆ ವರ್ಷಕ್ಕೆ ಕಾಲಿಡುತ್ತಿದೆ. ಈ ಹತ್ತಿತಳಿಗೆ ರೋಗಬಾಧೆ ಕಡಿಮೆ, ಖರ್ಚು ಹೆಚ್ಚಿಲ್ಲ ಮತ್ತು ಇಳುವರಿ ಅಧಿಕವಾಗಿ ರೈತರಿಗೆ ಅಪಾರ ಲಾಭ ತರುತ್ತಿದೆ ಎಂಬೆಲ್ಲಾ ಪೊಳ್ಳು ವರದಿಗಳನ್ನು, ಇದನ್ನು ಸೃಷ್ಟಿಸಿದ ಕಂಪೆನಿಗಳು ನೀಡುತ್ತಿವೆ. ಆದರೆ ಈ 'ಬಿಟಿ' ತಳಿ ಬೆಳೆದ ರೈತರು ಈ ಯಾವ ಲಾಭಗಳನ್ನೂ ಕಾಣದೆ ಕೈಸುಟ್ಟುಕೊಂಡು ಪರದಾಡುವಂತಾಗಿರುವರು. ಈ ನಿಟ್ಟಿನಲ್ಲಿ ಆಂಧ್ರದ 'ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ' (ಡಿಡಿಎಸ್) ನಡೆಸಿದ ಒಂದು ಸಂಶೋಧನೆಯ ಫಲಿತಾಂಶವನ್ನು ಇಲ್ಲಿ ಚರ್ಚಿಸಲಾಗಿದೆ. ಇದು ಆಂಧ್ರ ಸರ್ಕಾರದ ಕಣ್ಣು ತೆರೆಸುವಂತೆ ಮಾಡಿದ್ದು ಮಾತ್ರವಲ್ಲ, ಆ ಮೂಲಕ ಈ ಬಿಟಿ ಹತ್ತಿ ತಳಿಯ ಕೃಷಿಗೂ ಇಲ್ಲಿ, ಈ ಸಾಲಿನಲ್ಲಿ ಅನುಮತಿ ನಿರಾಕರಿಸುವಂತಾಗಲು ಕಾರಣವಾಗಿರುತ್ತದೆ.

ಡಿಡಿಎಸ್ - ಛಲಬಿಡದ ತ್ರಿವಿಕ್ರಮ

ಈ ಹೈದರಾಬಾದು ಮೂಲದ ಈ 'ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ' ಜೈವಿಕ ತಂತ್ರಜ್ಞಾನವನ್ನು ಹಿಂದೆ ಮುಂದೆ ನೋಡದೆ ಕೃಷಿಯಲ್ಲಿ ಅಳವಡಿಸುವುದರಿಂದಾಗುವ ಅಪಾಯಗಳ ವಿರುದ್ಧ ಸ್ಪಷ್ಟ ನಿಲುವು ತಳೆದು ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ. ಇದರ ಮುಖ್ಯಸ್ಥ ಕನ್ನಡಿಗ ಪಿ.ವಿ. ಸತೀಶ್. ಈ ಜೈವಿಕ ತಂತ್ರಜ್ಞಾನದ ತಾಂತ್ರಿಕ ಲೋಪ ದೋಷಗಳು, ಇದರ ದುಬಾರಿ ವೆಚ್ಚ, ಇದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮ, ಇದರ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ನಮ್ಮ ಬೀಜ ಮಾರುಕಟ್ಟೆ ಮೇಲಿನ ಹಿಡಿತ ಗಟ್ಟಿಯಾಗುವುದು, ಈ ಎಲ್ಲಾ ಅಪಾಯಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವ ಈ ಸಂಸ್ಥೆ ಆಂಧ್ರದ ರೈತರಿಗೆ ಈ ಬಗ್ಗೆ ಸತತ ಎಚ್ಚರಿಕೆಯನ್ನೂ ನೀಡುತ್ತಾ ಬಂದಿದೆ. ಈ ಹಿಂದೆ, 2001ರ ಜೂನ್ ಅಂತ್ಯದಲ್ಲಿ, ಅಂದಿನ ನಾಯ್ಡು ಸರ್ಕಾರ ಹೊರತಂದಿರುವ ಆಂಧ್ರದ ''ಅಭಿವೃದ್ಧಿ ದೂರಗಾಮಿ'' (Vission 2020) ಯೋಜನೆಯಲ್ಲಿನ ರೈತ ವಿರೋಧಿ ನಿಲುವುಗಳ ವಿರುದ್ಧ ಒಂದು ಜನತಾ ನ್ಯಾಯಾಲಯವನ್ನೇ ಏರ್ಪಡಿಸಿ ಐತಿಹಾಸಿಕ ವರದಿ ಪ್ರಜಾತೀರ್ಪನ್ನು ಸತೀಶ್ ನೇತೃತ್ವದ ಈ ಸಂಸ್ಥೆ ಹೊರತಂದಿರುವುದನ್ನು ಸ್ಮರಿಸಿಕೊಳ್ಳಬೇಕಾಗಿದೆ. ಕೃಷಿಕ್ಷೇತ್ರದಲ್ಲಿ ಜೈವಿಕ ತಂತ್ರ ಜ್ಞಾನವನ್ನು ಅಳವಡಿಸಿಕೊಳ್ಳುವ ವಿಚಾರದಲ್ಲಿ ಆಂಧ್ರದ ರೈತರ ಸ್ಪಷ್ಟ ನಿರಾಕರಣೆಯನ್ನು ಇದರಲ್ಲಿ ದಾಖಲಿಸಲಾಗಿರುತ್ತದೆ. 2002ರಲ್ಲಿ ಕೇಂದ್ರ ಸರ್ಕಾರ ಮಹಿಕೊ–ಮೊನ್ಸಾಂಟೊ ಕಂಪನಿಗಳ ಈ 'ಬಿಟಿ' ಹತ್ತಿತಳಿ ಬಿತ್ತನೆಗೆ ಅವಕಾಶ ನೀಡಿದ್ದು, ಅಂದಿನಿಂದ ಈ ಹತ್ತಿ ತಳಿ ಕೃಷಿ ಮಾಡುವ ರೈತರ ಹೊಲದಲ್ಲೇ ವ್ಯವಸ್ಥಿತ ರೀತಿಯಲ್ಲಿ ಅಂಕಿ ಅಂಶಗಳನ್ನು ಕಲೆ ಹಾಕುತ್ತಾ ಇದರ ಸಾಧಕ ಬಾಧಕಗಳನ್ನು ಡಿಡಿಎಸ್ ಅಧ್ಯಯನ ನಡೆಸುತ್ತಾ ಬಂದಿದೆ. ಜೊತೆಗೆ, ರೈತರ ಅಭಿಪ್ರಾಯ, ಅನುಭವ, ಆಕ್ರೋಶಗಳೆಲ್ಲವುಗಳ ವಿಡಿಯೊ ಚಿತ್ರೀಕರಣವನ್ನು ಈ ಸಂಸ್ಥೆ ನಡೆಸಿರುತ್ತದೆ, ಇವೆಲ್ಲವುಗಳ ಆಧಾರದ ಮೇಲೆ ವಿಸ್ತೃತವಾದ ವೈಜ್ಞಾನಿಕ ವರದಿಯನ್ನು ಕಳೆದ ಏಪ್ರಿಲ್ 14–15ರಂದು ಹೈದರಾಬಾದಿನಲ್ಲಿ ಜರುಗಿದ ಒಂದು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಹೊರಗೆಡುಹಿರುತ್ತದೆ. ಹೀಗೆ, ಸತೀಶ್ ನೇತೃತ್ವದ ಡಿ.ಡಿ.ಎಸ್. ಸಂಸ್ಥೆ ಛಲಬಿಡದ ತ್ರಿವಿಕ್ರಮನಂತೆ 'ಬಿಟಿ' ಹತ್ತಿಯ ಬೆನ್ನು ಹಿಡಿದು ಹೋರಾಟ ನಡೆಸಿ ಆಂಧ್ರದಿಂದ ಅದನ್ನು ಹೊರಹಾಕಲು ಈಗ ಯಶಸ್ವಿಯಾಗಿರುತ್ತದೆ.

ಸಂಶೋಧನಾ ರೀತಿ

ಮಹಿಕೊ–ಮೊನ್ಸಾಂಟೊ ಕಂಪನಿಗಳು ಹೇಳುವ ರೀತಿಯಲ್ಲಿ, ಈ 'ಬಿಟಿ' ಹತ್ತಿ ತಳಿ ಹೇಗೆ ಕಾಯಿಕೊರಕ ಪೀಡೆಯನ್ನು ನಿಯಂತ್ರಿಸಿ, ಕೀಟನಾಶಕ ಬಳಕೆಯನ್ನು ಕಡಿಮೆ ಮಾಡಿ ಇಳುವರಿಯನ್ನು ಹೆಚ್ಚಿಸುತ್ತದೆ ಎಂಬ ವಿಚಾರವನ್ನು, ರೈತರ ಹೊಲದಲ್ಲೇ ಪರೀಕ್ಷಿಸಿ ನೋಡುವುದು ಈ ಅಧ್ಯಯನದ ಮೂಲ ಉದ್ದೇಶ ವಾಗಿರುತ್ತದೆ. ಇದನ್ನು ಅಲ್ಲಿ ಚಾಲ್ತಿಯಲ್ಲಿರುವ ಹೈಬ್ರಿಡ್ ತಳಿಗಳೊಡನೆ ಹೋಲಿಸಿ ಪರೀಕ್ಷಿಸುವುದು ಹಾಗೂ ಕುಂಠಿತ ಮಳೆ ಮತ್ತು ಬರ ಸಮಯದಲ್ಲಿ ಈ 'ಬಿಟಿ' ಹತ್ತಿತಳಿ ವಿವಿಧ ವರ್ಗದ ರೈತರ ಹೊಲದಲ್ಲಿ ಯಾವ ರೀತಿಯಲ್ಲಿ ಫಲ ನೀಡುತ್ತದೆಂಬುದನ್ನು ಪರೀಕ್ಷಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿರುತ್ತದೆ. ಈ ಸಂಶೋಧನೆಯನ್ನು ಆಂಧ್ರಪ್ರದೇಶದ ಮೂರು ಮುಖ್ಯ ಹತ್ತಿ ಬೆಳೆ ತೆಗೆಯುವ ಜಿಲ್ಲೆಗಳಾದ ವಾರಂಗಲ್, ಅದಿಲಬಾದ್ ಮತ್ತು ನಾಲ್ಗೊಂಡದ 28 ಊರುಗಳಲ್ಲಿನ ಸುಮಾರು 220 ಬಿಟಿ ಹತ್ತಿ ತಳಿ ಬೆಳೆಯುವ ಮತ್ತೆ 220 ಇತರೆ ತಳಿ ಹತ್ತಿ ಬೆಳೆಯುವ ರೈತರ ಹೊಲಗಳಲ್ಲಿ ಕೈಗೊಳ್ಳಲಾಗಿರುತ್ತದೆ. ಈ ರೈತರಲ್ಲಿ ಶೇ 40ರಷ್ಟು ಮಳೆ ಆಶ್ರಯದ ರೈತರಾಗಿದ್ದು ಉಳಿದ ರೈತರಿಗೆ ನೀರಾವರಿ ಸೌಲಭ್ಯವಿರುತ್ತದೆ. ಈ ರೈತರಲ್ಲಿ ಶೇ 40ರಷ್ಟು ಎರಡು ಹೆಕ್ಟೇರ್‌ಗಳಿಗಿಂತ ಚಿಕ್ಕ ಹಿಡುವಳಿಯ ಸಣ್ಣ ರೈತರು, ಶೇ 41ರಷ್ಟು 2 ರಿಂದ 4 ಹೆಕ್ಟೇರ್‌ಗಳ ಮಧ್ಯಮ ರೈತರು, ಉಳಿದ ಶೇ 19ರಷ್ಟು ದೊಡ್ಡ ರೈತರಾಗಿರುವರು. ಬೆಳೆಯ ಪ್ರತಿ ಹಂತದಲ್ಲೂ ವಿಡಿಯೊ ಚಿತ್ರೀಕರಣದ ಜೊತೆಗೆ ಈ ರೈತರಿಂದ ಪ್ರತಿ 15 ದಿನಗಳಿಗೊಮ್ಮೆ ಕೃಷಿ ಬಗೆಗಿನ ಎಲ್ಲಾ ವಿವರವನ್ನು ಮೂರು ವರ್ಷಗಳ ಕಾಲ ಕಲೆ ಹಾಕಲಾಗಿರುತ್ತದೆ. 'ಆಂಧ್ರಪ್ರದೇಶ ವೈವಿಧ್ಯ ಪರ ಒಕ್ಕೂಟ' (AP Coalition in Defence of Diversity) ಈ ಅಧ್ಯಯನ ಕಾರ್ಯದಲ್ಲಿ ಸಹಕರಿಸಿರುತ್ತದೆ.

ತಪ್ಪಿದ ಲೆಕ್ಕಾಚಾರ

'ಬಿಟಿ' ತಳಿಯನ್ನು ಆಂಧ್ರದಲ್ಲಿ ಬಳಕೆಗೆ ಬಿಟ್ಟ ಮೊದಲ ವರ್ಷದಲ್ಲಿ ಅಂದರೆ 2002–03ರಲ್ಲಿ ಮಳೆ ಕಡಿಮೆ ಇದ್ದು ಬರ ತಲೆದೂರಿತ್ತು. ಹಾಗಾಗಿ, ಈ ತಳಿಯ ಪರಿಣಾಮ ಅತ್ಯಂತ ಕಳಪೆಯಾಗಿದ್ದು ಬಹುತೇಕ (ಸುಮಾರು ಶೇ 71) ರೈತರು ನಷ್ಟವನ್ನು ಅನುಭವಿಸುವಂತಾಯ್ತು. ಇದಕ್ಕೆ ವ್ಯತಿರಿಕ್ತವಾಗಿ ಬೇರೆ ಸಾಧಾರಣ ಹೈಬ್ರಿಡ್ ಹತ್ತಿ ತಳಿಗಳ ಮೇಲೆ ಈ ಹವಾಮಾನದ ವೈಪರಿತ್ಯ ಅಷ್ಟೇನೂ ಪರಿಣಾಮ ಬೀರದೆ, ಇವನ್ನು ಬೆಳೆದ ಬಹುಪಾಲು (ಶೇ 82) ರೈತರು ಅಲ್ಪ ಸ್ವಲ್ಪ ನಿವ್ವಳ ಲಾಭ ಗಳಿಸುವಂತಾದರು. ಈ ಸಾಧಾರಣ ಹೈಬ್ರಿಡ್ ಹತ್ತಿ ತಳಿ ಬೆಳೆದ ರೈತರಲ್ಲಿ ಅರ್ಧಕ್ಕಿಂತ ಅಧಿಕ ಭಾಗ ಎಕರೆಗೆ 5000ಕ್ಕಿಂತಲೂ ಮೀರಿ ನಿವ್ವಳ ಲಾಭ ಪಡೆಯುವಂತಾದರೆ 'ಬಿಟಿ' ತಳಿ ಬೆಳೆದ ರೈತರಲ್ಲಿ ಈ ಅದೃಷ್ಟ

''ಬಿಟಿ'' ಹತ್ತಿ ತಳಿಗೆ ಆಂಧ್ರದಲ್ಲಿ ವಿದಾಯ

ಕೇವಲ ಶೇ 8 ಮಂದಿಗೆ ಮಾತ್ರ ಲಭಿಸುವಂತಾಯ್ತು. ಅಂದರೆ, ಮಳೆ, ಹವಾಮಾನ ವೈಪರೀತ್ಯದ ವರ್ಷದಲ್ಲಿ ಈ 'ಬಿಟಿ' ಹತ್ತಿ ತಳಿ ಪರಿಣಾಮ ಕಾರಿಯಾಗದೇ ಇದನ್ನು ಬೆಳೆದ ಬಹುಪಾಲು ರೈತರು ನಷ್ಟ ಅನುಭವಿಸಿರುವುದು ಈ ಮೇಲಿನ ಅಂಕಿ ಅಂಶಗಳಿಂದ ಸಾಬೀತಾಯಿತು.

ಮುಂದಿನ ಎರಡು ವರ್ಷಗಳು ಅಂದರೆ 2003–05 ಹವಾಮಾನ, ಮಳೆ ದೃಷ್ಟಿಯಿಂದ ಹತ್ತಿ ಬೆಳೆಗೆ ಸ್ವಲ್ಪ ಒಳ್ಳೆಯ ಸಾಲುಗಳು ಎನ್ನಬಹುದು. ಈ ವರ್ಷಗಳಲ್ಲಿ 'ಬಿಟಿ' ಮತ್ತು ಇತರೆ ತಳಿ ಹತ್ತಿ ಬೆಳೆದ ರೈತರೆಲ್ಲರೂ ಸ್ವಲ್ಪ ಆದಾಯ ಗಳಿಸುವಂತಾದರು. ನೀರಾವರಿ ಸೌಲಭ್ಯವಿದ್ದ ದೊಡ್ಡ ರೈತರು ಇತರ ಹೈಬ್ರಿಡ್ ತಳಿಗೆ ಹೋಲಿಸಿದಲ್ಲಿ 'ಬಿಟಿ' ತಳಿ ಮೂಲಕ ಶೇ 20ರಷ್ಟು ಅಧಿಕ ಲಾಭ ಗಳಿಸಿದ್ದರೆ, ಮಳೆ ಆಶ್ರಯದ ಎಲ್ಲಾ ರೈತರು ಸಾಧಾರಣ ಹೈಬ್ರಿಡ್ ಹತ್ತಿ ತಳಿ ಬೆಳೆದು 'ಬಿಟಿ' ತಳಿಗಿಂತ ಶೇ 25ರಷ್ಟು ಅಧಿಕ ಲಾಭಾಂಶ ಪಡೆದಿರುವರು. ಅಂದ ಮೇಲೆ, ಮಳೆ, ಹವಾಮಾನ ಪರಿಸ್ಥಿತಿ ಸರಿಯಾಗಿದ್ದ ವರ್ಷಗಳಲ್ಲೂ 'ಬಿಟಿ' ಹತ್ತಿ ತಳಿ ನೀರಾವರಿ ಸೌಲಭ್ಯವಿದ್ದ ದೊಡ್ಡ ರೈತರಿಗೆ ಹೆಚ್ಚು ಲಾಭದಾಯಕವಾಗಿರುತ್ತದೆಯೆ ಹೊರತು ಮಳೆ ಆಶ್ರಯದ ಸಾಮಾನ್ಯ ರೈತರಿಗಲ್ಲ ಎಂಬುದು ಇದರಿಂದ ಸಾಬೀತಾ ದಂತಾಯಿತು. ಈ ರೀತಿ ಇತರೇ ಹೈಬ್ರಿಡ್ ತಳಿಗೆ ಹೋಲಿಸಿದಲ್ಲಿ ಕಳೆದ ಮೂರು ಸಾಲಿನಲ್ಲಿ 'ಬಿಟಿ' ಹತ್ತಿಯ ಕೃಷಿಯಿಂದ ಆಂಧ್ರದ ರೈತರು ಅನುಭವಿಸಿದ ಲಾಭ ನಷ್ಟಗಳ ಬಗೆಗಿನ ಸರಾಸರಿ ಆರ್ಥಿಕಾದಾಯಕತೆಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

ವಿವರಗಳು (ಎಕರೆಗೆ)	ಮೊನ್ಸಾಂಟೊ ತಳಿ	ಇತರ ಹೈಬ್ರಿಡ್ ತಳಿ	ಮೊನ್ಸಾಂಟೊ ತಳಿ ಬಳಕೆಯಿಂದಾದ ಹೆಚ್ಚಳ/ಕಡಿತ
ಬೀಜದ ವೆಚ್ಚ (ರೂ)	1557	466	ಶೇ 234 ಹೆಚ್ಚಳ
ಪೀಡೆ ನಿರ್ವಹಣಾ ವೆಚ್ಚ	2571	2766	ಶೇ 8 ಕಡಿತ
ಒಟ್ಟು ಉತ್ಪಾದನಾ ವೆಚ್ಚ	11,594	10,336	ಶೇ 12 ಹೆಚ್ಚಳ
ಇಳುವರಿ (ಕ್ವಿಂಟಲ್)	6.49	7	ಶೇ 8 ಕಡಿತ
ನಿವ್ವಳ ಆದಾಯ (ರೂ)	2032	4787	ಶೇ 58 ಕಡಿತ

ಪೀಡೆ ನಿರ್ವಹಣೆಯಲ್ಲಿ ಶೇ 8ರಷ್ಟು ಅತ್ಯಲ್ಪ ಪ್ರಮಾಣದ ಕಡಿತ ಬಿಟ್ಟಲ್ಲಿ ಮೊನ್ಸಾಂಟೊ ಹತ್ತಿತಳಿಯಿಂದ ಆಂಧ್ರದ ರೈತರಿಗೆ ಮತ್ತಾವುದೇ ಪ್ರಯೋಜನ ದೊರೆಯದಿರುವುದು ಈ ಅಧ್ಯಯನದಿಂದ ಮನದಟ್ಟಾಗುತ್ತಿದೆ. ಬದಲಿಗೆ, ಒಟ್ಟು ವೆಚ್ಚದಲ್ಲಿ, ಅದರಲ್ಲೂ ಮುಖ್ಯವಾಗಿ ಬೀಜದ ಬಾಬ್ತಿಗಾಗಿ ರೈತರು ಮಿತಿ ಮೀರಿದ (ಶೇ 234 ಅಧಿಕ) ವೆಚ್ಚ ಭರಿಸುವಂತಾಗಿರುವುದು ಮುಖ್ಯ ಸಂಗತಿ. ಎಕರೆ ಒಂದಕ್ಕೆ ಬೇಕಾಗಿರುವ ಮೊನ್ಸಾಂಟೊ ಬೀಜಕ್ಕೆ ಸುಮಾರು 1557 ರೂ ತಗುಲಿದ್ದು, ಒಟ್ಟು ಉತ್ಪಾದನ ವೆಚ್ಚದಲ್ಲಿ ಇದು ಶೇ 13.4 ಪಾಲು ಆಕ್ರಮಿಸಿರುತ್ತದೆ. ಇಷ್ಟೆಲ್ಲಾ ವೆಚ್ಚ ಭರಿಸಿದರೂ 'ಬಿಟಿ' ಹತ್ತಿತಳಿಯಲ್ಲಿ ಇಳುವರಿ ಬೇರೆ ಹೈಬ್ರಿಡ್ ತಳಿಗಳಿಗಿಂತ ಶೇ 8ರಷ್ಟು ಖೋತಾ ಆಗಿರುತ್ತದೆ!

ಮೊನ್ಸಾಂಟೊ ಹತ್ತಿತಳಿ ಈ ಕಾಯಿಕೊರಕದ ಹಾವಳಿಗೆ ಸ್ವಲ್ಪ ತಡೆ ಹಾಕಿದರೂ ಈ ನಿಟ್ಟಿನಲ್ಲಾದ ಉಳಿತಾಯ ಮಾತ್ರ ಅತ್ಯಲ್ಪ (ಶೇ 8ರಷ್ಟು), ಬದಲಿಗೆ ಹೇನು (Aphids), ಜಿಗಿ ಹುಳು (Jassids) ಮುಂತಾದ ರಸ ಹೀರುವ ಕೀಟಗಳ (Sucking Insects) ಕಾಟ ಈ 'ಬಿಟಿ' ಹತ್ತಿ ತಳಿ ಬೆಳೆಯ ಮೇಲೆ ಹೆಚ್ಚಾಗಿರುವುದು ಈ ಅಧ್ಯಯನದಿಂದ ತಿಳಿದು ಬಂದಿದೆ. ಜೊತೆಗೆ, ಈ ತಳಿಗೆ ಶೇ 18ರಷ್ಟು ಅಧಿಕ ನೀರನ್ನೂ ಹಾಗೇ ಹೆಚ್ಚು ರಸಗೊಬ್ಬರವನ್ನೂ ಕೊಡಬೇಕಾಗಿ ಬಂದಿದೆ. ಇವೆಲ್ಲವುಗಳ ಒಟ್ಟಾರೆ ಪರಿಣಾಮ 'ಬಿಟಿ' ಹತ್ತಿ ತಳಿಗೆ ಮೊರೆ ಹೊಕ್ಕ ಆಂಧ್ರದ ರೈತರು ಸಾಧಾರಣ ಹೈಬ್ರಿಡ್ ತಳಿ ಬೆಳೆದ ರೈತರು ಗಳಿಸಿದ ನಿವ್ವಳ ಲಾಭದಲ್ಲಿ ಅರ್ಧದಷ್ಟನ್ನು ಪಡೆಯಲೂ ವಿಫಲರಾಗಿರುವುದು.

ಪರಿಸರ ಅಸಮತೋಲನ

ಇವೆಲ್ಲಕ್ಕಿಂತ ಮುಖ್ಯವಾಗಿ ಈ 'ಬಿಟಿ' ಹತ್ತಿ ತಳಿ ಕೃಷಿಯಿಂದಾಗಿ ಬೇರೆ ಉಪಯುಕ್ತ ಕ್ರಿಮಿ ಕೀಟಗಳ ಮೇಲೆ ಅಹಿತಕರ ಪರಿಣಾಮವಾಗಿ ಅವುಗಳ ಸಂಖ್ಯೆಯಲ್ಲಿ ಏರುಪೇರಾಗುವ ಮೂಲಕ ಪರಿಸರ ಅಸಮತೋಲನವೇ ಉಂಟಾಗಿರುವುದು ಈ ಹಿಂದೆ ಚೀನಾ ದೇಶದಲ್ಲಿ ನಡೆಸಿದ ಒಂದು ಸಂಶೋಧನಾ ವರದಿಯಿಂದ ಅರಿವಾಗಿರುತ್ತದೆ. ಇದಕ್ಕೆ ಪೂರಕವಾದ ಅಂಕಿ ಅಂಶಗಳು ಆಂಧ್ರದ ಅಧ್ಯಯನದ ಮೂಲಕವೂ ವ್ಯಕ್ತವಾಗಿರುತ್ತವೆ. ಈ 'ಬಿಟಿ' ಹತ್ತಿ ತಳಿ ಬೇಗ ಹೂ ಬಿಡಲು ಶುರು ಮಾಡಿದ್ದು ಇದಕ್ಕೆ ಆಕರ್ಷಿತವಾಗಿ ಕಾಯಿಕೊರಕ ಪೀಡೆಯ ಮಾತೃ ಪತಂಗ ಇವುಗಳ ಮೇಲೆ ಬಹುಬೇಗ ದಾಳಿ ಮಾಡಲು ಶುರು ಮಾಡಿರುತ್ತವೆ. 'ಬಿಟಿ' ಹತ್ತಿ ತಳಿಯೊಳಗಿನ ಕೀಟನಾಶಕ ಅಂಶ ಮೊದ ಮೊದಲಿಗೆ ಈ ಪೀಡೆಗಳನ್ನೇನೋ ನಿಯಂತ್ರಿಸಲು ಸಹಕಾರಿ ಯಾಗಬಹುದು. ಆದರೆ ಕೆಲವು ಕಾಯಿಕೊರಕಗಳು ಈ ಕೀಟನಾಶಕದ ವಿರುದ್ಧ ಪ್ರತಿರೋಧವನ್ನು ಹೆಚ್ಚಿಸಿಕೊಂಡು, ಮತ್ತಷ್ಟು ಬಲ ಪಡೆದುಕೊಳ್ಳುವ ವಿಚಾರವನ್ನೂ ವಿಜ್ಞಾನಿಗಳೂ ಒಪ್ಪುತ್ತಾರೆ. ಇವುಗಳು, ಆನಂತರ ಸಕಾಲದಲ್ಲಿ ಹೂ ಬಿಟ್ಟ ಬೇರೆ ಹತ್ತಿ ತಳಿ ಹೊಲಗಳ ಮೇಲೆ ತಮ್ಮ ದಾಳಿ ಹೆಚ್ಚಿಸಿರುವ ಸಾಧ್ಯತೆಯನ್ನೂ ಆಂಧ್ರದ ಈ ಅಧ್ಯಯನ ವರದಿ ಎತ್ತಿ ತೋರಿಸಿರುತ್ತದೆ. ಹಾಗೇ, ಕಾಯಿ ಉದುರುವಿಕೆ ಈ 'ಬಿಟಿ' ತಳಿಯಲ್ಲಿ, ಬೇರೆ ಹೈಬ್ರಿಡ್ ತಳಿಗೆ ಹೋಲಿಸಿದಲ್ಲಿ ಶೇ 40ರಷ್ಟು ಅಧಿಕವಾಗಿರುತ್ತದೆ. ಇದರಿಂದಾಗಿಯೇ, ಈ 'ಬಿಟಿ' ಹತ್ತಿ ತಳಿ ಇಳುವರಿ ಕಡಿಮೆಯಾಗಿರುತ್ತದೆ. ಆದರೆ ಅಡ್ಡಪರಾಗ ಸ್ಪರ್ಶದ ಮೂಲಕ ಈ ಗುಣ ಬೇರೆ ಹತ್ತಿ ತಳಿಗಳಿಗೂ ಹಸ್ತಾಂತರವಾಗುವ ಸಾಧ್ಯತೆಯಿದೆ ಎಂದು ಈ ಅಧ್ಯಯನದ ವರದಿ ಎಚ್ಚರಿಸಿರುತ್ತದೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ, ಈ 'ಬಿಟಿ' ಹತ್ತಿತಳಿಯಲ್ಲಿ, ಅದರಲ್ಲೂ ಮುಖ್ಯವಾಗಿ ಮಳೆ ಆಶ್ರಯದ ಕೃಷಿಯಲ್ಲಿ ಬೇರು ಕೊಳೆಯುವ (root rot) ಹೊಸ ರೋಗ ವೊಂದು ಕಾಣಿಸಿಕೊಂಡಿರುತ್ತದೆ. ಈ ರೋಗದ ಪ್ರಮಾಣ ಶೇ 20–40 ರಷ್ಟಿರುವುದಾಗಿ ವರದಿ ತಿಳಿಸಿರುತ್ತದೆ. ಇವೆಲ್ಲವುಗಳ ಬಾಬ್ತಿನ ಪರಿಸರ ವೆಚ್ಚ (Ecological Costs)ಗಳನ್ನು ಇನ್ನೂ ಲೆಕ್ಕ ಹಾಕಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ ಭವಿಷ್ಯದಲ್ಲಿ ಆಂಧ್ರದ ಹತ್ತಿ ಕೃಷಿ, ಕೃಷಿಯ ಸುಸ್ಥಿರತೆಗೇ ಗಂಡಾಂತರ ತರಬಹುದಾದ ಸಾಧ್ಯತೆಯನ್ನು ಈ ಅಧ್ಯಯನ ಎತ್ತಿ ತೋರಿಸಿರುತ್ತದೆ.

ಸಣ್ಣ ರೈತರಿಗೊಂದು ಶಾಪ:

ಮೊನ್ಸಾಂಟೊ ಹತ್ತಿ ನಂಬಿದ ಸಣ್ಣ ರೈತರ ಅದರಲ್ಲೂ ಮಳೆ ಆಶ್ರಯದ ಬಡ ರೈತರ ಮೇಲಂತೂ ಈ ತಳಿ ಹೊರಲಾಗದ ಹೊರೆ ಹೇರಿರುತ್ತದೆ. ಈ 'ಬಿಟಿ' ತಳಿ ಬೆಳೆಸಿದ ಸಣ್ಣ ರೈತರು ಬೇರೆ ಹೈಬ್ರಿಡ್ ತಳಿ ಬೆಳಸಿದ ರೈತರಿಗಿಂತಲೂ ಎಕರೆಗೆ ಸುಮಾರು ಎರಡು ಸಾವಿರ (ಶೇ 20ರಷ್ಟು) ಅಧಿಕ ವೆಚ್ಚ ಭರಿಸುವಂತಾಗಿರುವರು. ಹಾಗಿದ್ದರೂ ಮಳೆ ಸ್ವಲ್ಪ ಉತ್ತಮವಾಗಿದ್ದ ಕಳೆದ ಸಾಲಿನಲ್ಲಿ (2004–05), ಈ ಮೊನ್ಸಾಂಟೊ ಹತ್ತಿ ಬೆಳೆದ ಆಂಧ್ರದ ಸಣ್ಣ ರೈತರು ಎಕರೆ ಒಂದಕ್ಕೆ ಸರಾಸರಿ ಒಂದು ಸಾವಿರ ರೂ.ಗಳಷ್ಟು ನಷ್ಟ ಅನುಭವಿಸಿರುವರು ಎಂದ ಮೇಲೆ ಈ 'ಬಿಟಿ' ತಳಿಯಲ್ಲಿ ಅಂತರ್ಗತವಾಗಿರುವ ಬಡ ರೈತರ ವಿರುದ್ಧದ ಅಸಮಾನ ಪರಿಣಾಮ ಅರ್ಥವಾಗುತ್ತದೆ. ಹೀಗೆ, ಸಣ್ಣ ರೈತರ ಪಾಲಿಗಂತೂ ಈ 'ಬಿಟಿ' ತಳಿ ಒಂದರ್ಥದಲ್ಲಿ ಶಾಪವಾಗಿ ಪರಿಣಮಿಸಿದೆ ಎಂದರೆ ತಪ್ಪಾಗ ಲಾರದು.

ಇವೆಲ್ಲಾ ಘನೀಕೃತಗೊಂಡು, ಅಧಿಕ ವೆಚ್ಚ, ಕೈಕೊಟ್ಟ ಪೈರು, ಪರಿಣಾಮವಾಗಿ ಸಾಲದ ಬಾಧೆ ಇವೆಲ್ಲವುಗಳ ಹೊಡೆತ ತಾಳಲಾರದ ಆಂಧ್ರದ ಈ ನತದೃಷ್ಟ ರೈತರು ಈಗ ಆತ್ಮಹತ್ಯೆ, ಹಿಂಸೆಗಳಿಗೆ ಇಳಿಯುವಂತಾಗಿರುವರು. ರೈತರ ಆತ್ಮಹತ್ಯೆ, ಅದರಲ್ಲೂ ಹತ್ತಿ ಬೆಳೆಗಾರರ ಸಾಮೂಹಿಕ ಆತ್ಮಹತ್ಯೆಯಲ್ಲಿ ದೇಶದಲ್ಲೇ ಮೊದಲು ಹೆಸರು ಮಾಡಿರುವ ರಾಜ್ಯ ಈ ಆಂಧ್ರ ಪ್ರದೇಶ. ಈಗ 'ಬಿಟಿ' ಹತ್ತಿಗೆ ಮಾರು ಹೋದ ರೈತರಲ್ಲೂ ಈ ಆತ್ಮಹತ್ಯೆಯ ಪ್ರವೃತ್ತಿ ಶುರುವಾಗಿದೆ ಎಂದ ಮೇಲೆ ಪರಿಸ್ಥಿತಿಯ ಗಂಭೀರತೆ ಅರಿವಾಗುತ್ತದೆ. ಹಚ್ಚಾಶ ಎಂಬ ವಾರಂಗಲ್ ಜಿಲ್ಲೆಯ ರೈತ ಮಹಿಳೆ, ಎರಡು ಎಕರೆ ಭೂಮಿಯನ್ನು ಗೇಣಿಗೆ ಪಡೆದು ಅಪಾರ ಭರವಸೆಯಿಂದ ಈ 'ಬಿಟಿ' ತಳಿ ಹತ್ತಿ ಕೃಷಿಯನ್ನು ಕಳೆದ ಸಾಲಿನಲ್ಲಿ ಕೈಗೊಂಡಳು. ನಂತರ, ಬೆಳೆ ಸಂಪೂರ್ಣ ನಾಶವಾಗಿ ಬೇರೆ ದಾರಿ ಕಾಣದೆ ಆತ್ಮಹತ್ಯೆ ದಾರಿ ಹಿಡಿಯುವಂತಾಗಿರುವಳು. ಬೆಳೆ ಹಾನಿಯಿಂದ ರೊಚ್ಚಿಗೆದ್ದ ವಾರಂಗಲ್ ಜಿಲ್ಲೆಯ ರೈತರು ಮೊನ್ಸಾಂಟೊ ಕಂಪನಿಯ ಪ್ರತಿನಿಧಿ ಗಳನ್ನು ಘೇರಾವು ಮಾಡಿ, ಅಂಗಡಿಗೆ ನುಗ್ಗಿ ಹಲ್ಲೆ ನಡೆಸಿ ಬೀಜದ ಮಳಿಗೆಗೆ ಬೆಂಕಿ ಇಟ್ಟಿರುವ ಘಟನೆ ಇತ್ತೀಚೆಗೆ ನಡೆದಿರುತ್ತದೆ. ವಾರಂಗಲ್ ಜಿಲ್ಲೆ ನಕ್ಸಲ್ ಚಟುವಟಿಕೆಗೆ ಹೆಸರಾಗಿದ್ದು, ನಕ್ಸಲ್‌ರಾದರೂ ತಮ್ಮ ಸಹಾಯಕ್ಕೆ ಬಂದು ಮೊನ್ಸಾಂಟೋ ಕಂಪನಿಯಿಂದ ತಮಗೆ ಪರಿಹಾರ ಸಿಗುವಂತೆ ಮಾಡಲಿ ಎನ್ನುವ ಮಟ್ಟಿಗೆ ಅಲ್ಲಿನ ರೈತರು ಹತಾಶರಾಗಿರುವರು. ಹೀಗೆ, ಭರವಸೆಯ ಭ್ರಮೆಯನ್ನೇ ಸೃಷ್ಟಿಸಿದ್ದ ಮೊನ್ಸಾಂಟೋ 'ಬಿಟಿ' ಹತ್ತಿ ತಳಿ ಇಂದು ಹಿಂಸೆಯ ಬೀಜವಾಗಿ ಮಾರ್ಪಾಟಾಗಿರುತ್ತದೆ. ಇವೆಲ್ಲವನ್ನು ಅರ್ಥಮಾಡಿಕೊಂಡೋ ಅಥವ ರಾಜಕೀಯ ಒತ್ತಡಕ್ಕೆ ಮಣಿದೋ ಆಂಧ್ರ ಸರ್ಕಾರ ಸಕಾಲದಲ್ಲಿ ಎಚ್ಚೆತ್ತುಕೊಂಡು, ಈ ಬಿಟಿ ಹತ್ತಿ ತಳಿಯ ಕೃಷಿಯನ್ನು ಈ ಸಾಲಿನಲ್ಲಿ ತನ್ನ ನೆಲದಲ್ಲಿ ಮುಂದುವರೆಯಲು ಅವಕಾಶ ಮಾಡಿಕೊಟ್ಟಿಲ್ಲ. ಇದು ಅತ್ಯಂತ ಪ್ರಶಂಸನೀಯ ಕ್ರಮ. ಆದರೆ ಈ ನಿಟ್ಟಿನಲ್ಲಿ ಚಿಂತಿಸದ ಕರ್ನಾಟಕ ಸರ್ಕಾರ, ರಾಜ್ಯದಲ್ಲಿ ಎರಡು ಮೊನ್ಸಾಂಟೊ 'ಬಿಟಿ' ಹತ್ತಿ ತಳಿಗಳ ಕೃಷಿಗೆ ಅನುಮತಿ ನೀಡಿರುತ್ತದೆ. ಆಂಧ್ರದ 'ಬಿಟಿ' ಹತ್ತಿ ತಳಿಯ ಅವಾಂತರಗಳು ಕರ್ನಾಟಕದಲ್ಲಿ ತಲೆದೋರದಿರುವ ಖಾತರಿಯಾದರೂ ನಮ್ಮ ಸರ್ಕಾರಕ್ಕೆ ಏನಿದೆ ಎಂಬುದಂತೂ ಅರ್ಥವಾಗುತ್ತಿಲ್ಲ.

ಅಡಿಕೆ ಹಾಳೆ ತಟ್ಟೆ ತಯಾರಿಕೆ

ಶಿರಸಿ ನಿವಾಸಿಯಾದ ನಾಗೇಂದ್ರ ಹೆಗಡೆ ಹಾಗೂ ಬೆಳ್ಳಕೆರೆ ಕೃಷ್ಣ ಹೆಗಡೆಯವರು ಜೊತೆಗೂಡಿ ಒಂದು ವರ್ಷದ ಹಿಂದೆ ಬೆಂಗಳೂರು ಮೂಲದ ಸಂಸ್ಥೆಯ 'ಇಕೋ–ಗ್ರೀನ್' ಸಂಪರ್ಕ ಮಾಡಿದರು. ಆಗ ಅವರ ಮುಂದೆ ಒಂದು ಅಚ್ಚರಿ ಕಾದಿತ್ತು. ಪರಿಸರ ಸ್ನೇಹಿ ವಸ್ತುಗಳ ಉತ್ಪನ್ನಗಳು, ತ್ಯಾಜ್ಯ ವಸ್ತುಗಳಿಂದ ಎರೆಗೊಬ್ಬರ, ಮೂಲಿಕಾ ತೈಲ, ಹೀಗೆ ಹತ್ತು ಹಲವಾರು ವೈವಿಧ್ಯಮಯ ಯೋಜನೆಗಳನ್ನು ವರ್ಷಗಳಿಂದ ನಡೆಸಿಕೊಂಡು ಬಂದಿದ್ದ ಸಂಸ್ಥೆ ಇದಾಗಿತ್ತು. ಹೆಗಡೆಯವರು ಈ ಸಂಸ್ಥೆಯೊಡನೆ 'ತಯಾರಾದಾಗ ಕೊಂಡುಕೊಳ್ಳುವ –ಬೈ ಬ್ಯಾಕ್' ಕರಾರು ಮಾಡಿಕೊಂಡರು. ಇದಕ್ಕಾಗಿ ಒಂದು ಅಡಿಕೆ ಹಾಳೆ ತಟ್ಟೆ ತಯಾರಿಸುವ ಉಪಕರಣವನ್ನು 17,450 ರೂಪಾಯಿಗಳಿಗೆ ತರಿಸಿಕೊಂಡರು. ಈ ಯಂತ್ರವನ್ನು ಕಂಪನಿಯವರೇ ತಂದು ಶಿರಸಿಯಲ್ಲಿಯ ಹೆಗಡೆದ್ವಯರ ಚಿಕ್ಕ ವರ್ಕ್‌ಶಾಪ್‌ನಲ್ಲಿ ಕೂರಿಸಿ ಅದರ ಮೂಲಕ ಪ್ಲೇಟ್ ತಯಾರಿಸುವ ತರಬೇತಿಯನ್ನು ಕೂಡ ಮೂರು ದಿನಗಳ ಕಾಲ ಉಚಿತವಾಗಿ ನೀಡಿದರು.

ಅಡಿಕೆ ಹಾಳೆ ತಟ್ಟೆ ತಯಾರಿಸುವ ಉದ್ಯಮಕ್ಕೆ ಬೇಕಾದ ಕಚ್ಚಾ ವಸ್ತುವಾದ ಅಡಿಕೆ ಹಾಳೆಗಳನ್ನು ಹೆಗಡೆಯವರು ಸಮೀಪದ ಹಳ್ಳಿಗಳ ಅಡಿಕೆ ತೋಟ ಹೊಂದಿರುವ ರೈತರಿಂದ ಖರೀದಿಸುತ್ತಾರೆ. ಒಂದು ಲಾರಿಗೆ ಅಂದಾಜು 100 ಹಾಳೆ ಕಟ್ಟುಗಳು ಹಿಡಿಯುತ್ತಿದ್ದು, ಪ್ರತಿ ಕಟ್ಟಿನಲ್ಲಿ ಸರಿ ಸುಮಾರು 100–125 ಹಾಳೆಗಳಿರುತ್ತವೆ. ಈ ಅಡಿಕೆ ಹಾಳೆ ತಟ್ಟೆ ತಯಾರಿಕೆಯ ಮಾಸಿಕ ಆರ್ಥಿಕತೆ (2 ಯಂತ್ರದಿಂದ) ಕೆಳಗೆ ಕೊಡಲಾಗಿದೆ.

ಅ. ಪುನರಾವರ್ತಿತ ಚರ ವೆಚ್ಚಗಳು (**Variable costs**): ಅಡಿಕೆ ಹಾಳೆ ತಯಾರಿಕೆಗೆ ಪ್ರಸ್ತುತ 3398 ರೂ. ಚರ ವೆಚ್ಚ ತಗಲುತ್ತಿದೆ. ಇದರಲ್ಲಿ ಹಾಳೆ ಖರೀದಿ, ಸಾಗಾಟ, ಆಳು, ಕಾರ್ಯಾಗಾರದ ಬಾಡಿಗೆ, ವಿದ್ಯುತ್ ಖರ್ಚು, ಅಡಿಕೆ ತಟ್ಟೆ ಸಾಗಾಟ ಮುಂತಾದವುಗಳು ಸೇರುತ್ತವೆ.

ಆ. ಪುನರಾವರ್ತಿತವಲ್ಲದ ಸ್ಥಿರ ವೆಚ್ಚಗಳು (**Fixed costs**): ಅಡಿಕೆ ಹಾಳೆ ತಟ್ಟೆ ತಯಾರಿಕಾ ಯಂತ್ರ (ಪ್ರತಿ ಯಂತ್ರಕ್ಕೆ 17,450 ರೂಪಾಯಿಗಳಂತೆ) ಒಟ್ಟು 34,900 ರೂ.ಗಳು

ಇ. ಆದಾಯ: ದಿನಕ್ಕೆ 2 ಯಂತ್ರಗಳಿಂದ ಒಟ್ಟು 300 ಎಂಟು ಇಂಚು ತಟ್ಟೆ ಹಾಗು 700 ನಾಲ್ಕು ಇಂಚು ತಟ್ಟೆಯಂತೆ ತಿಂಗಳಿಗೆ ಒಟ್ಟು 26,000 ತಟ್ಟೆಗಳನ್ನು ಉತ್ಪಾದಿಸಬಹುದು. ಪ್ರತಿ ಇಂಚಿಗೆ 8 ಪೈಸೆಯಂತೆ 8 ಇಂಚು ತಟ್ಟೆಗೆ 64 ಪೈಸೆ ಹಾಗು 4 ಇಂಚು ತಟ್ಟೆಗೆ 32 ಪೈಸೆ. ಒಟ್ಟಾರೆ ತಿಂಗಳ ಆದಾಯ 10,816 ಸಿಗುತ್ತದೆ (ತ್ಯಾಜ್ಯ ವಸ್ತುವಿನಿಂದ ಬರಬಹುದಾದ ಆದಾಯವನ್ನು ಗಣನೆಗೆ ತೆಗೆದುಕೊಂಡಿಲ್ಲ). ಒಟ್ಟಾರೆ ಮೂಲ ನಿವ್ವಳ ಆದಾಯ, (ಯಂತ್ರದ ಸವಕಳಿ (Depreciation) ಯನ್ನು ಪರಿಗಣಿಸಿಲ್ಲ) 7,418 ರೂ ಸಿಗುತ್ತದೆ. ಈ ಪ್ರಮಾಣದಲ್ಲಿ ತಿಂಗಳ ಆದಾಯದಿಂದ ಒಂದು ಕುಟುಂಬ ನೆಮ್ಮದಿ ಜೀವನ ನಡೆಸಲು ಸಾಕಷ್ಟೆ? ಅದೂ ಗ್ರಾಮಾಂತರ ಪ್ರದೇಶದಲ್ಲಿ. ಇದು ದೇಶೀ ಉದ್ಯಮದ ಸಾಮರ್ಥ್ಯ.

ಮೂಲ: ಕೃಷಿ ಲೋಕ, ಏಪ್ರಿಲ್, 2005, ಸಂಪುಟ 38, ಸಂಚಿಕೆ 9

ಕೀಟಗಳಿಂದ ವಸ್ತ್ರಗಳ ರಕ್ಷಣೆ

ಉಪದ್ರವಿ ಕೀಟಗಳಿಂದ ಬಟ್ಟೆಗಳು ಹಾಳಾಗದಂತೆ ರಕ್ಷಿಸಿಕೊಳ್ಳಲು ಇಲ್ಲೊಂದು ಸುಲಭೋಪಾಯವಿದೆ. ತಲಾ 50 ಗ್ರಾಂ ತೂಕದ ಕರೀ ಜೀರಿಗೆ *(Nigella sotiva)*, ಬಜೆ *(Acorus calamus)*, ಕರ್ಪೂರ, ಕಸ್ತೂರಿ ಅರಿಶಿನ *(Curarma aronatiea)* ಮತ್ತು ಕಾಮಕಸ್ತೂರಿಯನ್ನು ಹತ್ತಿ ಬಟ್ಟೆಯಲ್ಲಿ ಹಾಕಿ ಬಟ್ಟೆ ಇಡುವ ಸ್ಥಳ/ಕಪಾಟಿನಲ್ಲಿಡಿ. ಈ ಸಸ್ಯಗಳು ಹೊರಸೂಸುವ ವಾಸನೆಗೆ ಕೀಟಗಳು ಬಟ್ಟೆಯ ಸಮೀಪ ಸುಳಿಯುವುದಿಲ್ಲ!

ಚೇಳುಹುಲ್ಲಿನಿಂದ ಇಲಿಗಳ ನಿಯಂತ್ರಣ



ಬೆಳೆಗಳನ್ನು ಇಲಿಗಳಿಂದ ರಕ್ಷಿಸಿಕೊಳ್ಳಲು ಒಂದು ಹೊಸ ವಿಧಾನ ಹೀಗಿದೆ. ಉತ್ತರಾಂಚಲದ ಉಧಮ್‌ಸಿಂಗ್ ನಗರ ಜಿಲ್ಲೆಯ ರೈತ ಶಿವದತ್ ಪಾಠಕ ತಮ್ಮ ಹೊಲದಲ್ಲಿ ಚೇಳಿನ ಹುಲ್ಲನ್ನು *(Urtica dioica)* ಅಲ್ಲಲ್ಲಿ ಬಿಸಾಡುತ್ತಾರೆ. ಹೀಗೆ ಬಿದ್ದ ಹುಲ್ಲಿನ ಮುಳ್ಳು ಚೇಳಿನ ಕೊಂಡಿಯಂತೆ ಕಾಣಿಸುವುದರಿಂದ ಇಲಿಗಳು ಬೆಳೆಯ ಹತ್ತಿರ ಸುಳಿಯುವುದಿಲ್ಲ. ಈ ಮುಳ್ಳಿನ ಸಂಪರ್ಕದಿಂದ ಇಲಿಗಳಲ್ಲಿ ನವೆ, ಜೊಲ್ಲುಸುರಿಯುವಿಕೆ ಕಾಣಿಸುತ್ತದೆ. ಹತ್ತಿರ ಸುಳಿದರೂ ಇವು ಇಲಿಗಳಿಗೆ ಮತ್ತಷ್ಟು ಬಾಧೆ ನೀಡುತ್ತದೆ.

*ಮೂಲ: ಹನಿ ಬೀ, **Vol.** 15(2) ಏಪ್ರಿಲ್-ಜೂನ್, 2004, ಪು.14*

ಮಂಗನ ಉಪದ್ರವಕ್ಕೆ ರಾಕೆಟ್ ದಾಳಿ!

ಪಶ್ಚಿಮಘಟ್ಟದ ಅಡಿಕೆ, ತೆಂಗು ತೋಟಗಳಿಗೆ ಮಂಗಗಳ ಹಾವಳಿ ವಿಪರೀತ ಹೆಚ್ಚಾಗುತ್ತಿದ್ದು, ಈ ಭಾಗದ ತೋಟದ ಮಾಲೀಕರನ್ನು ಚಿಂತೆಗೀಡು ಮಾಡಿವೆ. ರೈತರು ಈ ಮಂಗಗಳನ್ನು ಓಡಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಂತಹ ಒಂದು ಪ್ರಯತ್ನ 'ಪಿವಿಸಿ ಪೈಪಿನ ಕೋವಿ'. ಕೋವಿಯ ತುದಿಗೆ ರಾಕೆಟ್ (ದೀಪಾವಳಿಯಲ್ಲಿ ಸಿಡಿಸುವ ರಾಕೆಟ್) ಜೋಡಿಸಿ, ಕಂಕುಳಲ್ಲಿ ಭದ್ರವಾಗಿಟ್ಟು, ಬೆಂಕಿ ತಾಗಿಸಿ ಸಿಡಿಸಿದ ರಾಕೆಟ್‌ಗಳಿಗೆ ಹೆದರಿ ಮಂಗಗಳು ದಿಕ್ಕಾಪಾಲು! ಬೇರೆ ಬೇರೆ ವ್ಯಾಸದ ಪಿವಿಸಿ ಪೈಪುಗಳ ತುಂಡಿನಿಂದ ಜೋಡಿಸಿ ಮಾಡಿದ ಎರಡು ಅಡಿ ಉದ್ದದ ಈ ಕೋವಿಯಿಂದ ಒಂದು ಸಲಕ್ಕೆ ನಾಲ್ಕೈದು ರಾಕೆಟ್ ಹಾರಿಸಬಹುದು. ಈ ಪ್ರಯೋಗವನ್ನು ಪುತ್ತೂರಿನ ಉದಯ್‌ರವರು ಉಪಯೋಗಿಸುತ್ತಿದ್ದಾರೆ.

ಆಧಾರ: ಪ್ರಜಾವಾಣಿ, 12-1-2005

ಬಸವನ ಹುಳುವಿನ ನಿಯಂತ್ರಣಕ್ಕೆ

ಬಸವನ ಹುಳುಗಳು ರಾತ್ರಿ ವೇಳೆ ಬೆಳೆಗಳ ಮೇಲೆ ಹಾವಳಿ ನಡೆಸುತ್ತವೆ. ನೂರಾರು ಮರಿಗಳು ಬೇಸಿಗೆಯಲ್ಲಿ ಮಣ್ಣಿನ ಪದರದಲ್ಲಿ ಸೇರಿಕೊಳ್ಳುತ್ತವೆ. ಇವುಗಳ ನಿಯಂತ್ರಣಕ್ಕೆ ರೈತರಿಗೆ ಬಸವನ ಹುಳುವಿನ ಮೇಲಿರುವ ಮಮಕಾರ ಅಡ್ಡಿ ಬರುತ್ತದೆ. ಆದರೆ ನಮ್ಮ ಹಾಸನದ ಸಾವಯವ ಕೃಷಿಕ ಬಸವರಾಜು ಸಂತೇಶಿವರ ಕ್ರಮ ಈ ಕೆಳಕಂಡಂತಿದೆ.

ಬೆಳೆಗಳ ಮಧ್ಯ ಅಲ್ಲಲ್ಲಿ ಸಸ್ಯ ತ್ಯಾಜ್ಯ (ತೆಂಗಿನ ಗರಿ, ಅಡಕೆ ಗರಿ, ಹಸಿರೆಲೆ) ಇತ್ಯಾದಿಗಳ ರಾಶಿ ಹಾಕಿ, ಎರಡು ದಿನಗಳ ನಂತರ ರಾಶಿಯ ಸುತ್ತ ಬಾಳೆ ಮರದ ಪಟ್ಟೆ ಅಥವಾ ಅಡಕೆ ಪಟ್ಟೆಗಳನ್ನು ಜೋಡಿಸಬೇಕು. ಇದರ ಅಡಿಯಲ್ಲಿ ಬಸವನ ಹುಳುಗಳೆಲ್ಲಾ ಬಂದು ಸೇರುವವು. ನಂತರ ಸುಣ್ಣದ ಪುಡಿ ಮತ್ತು ಉಪ್ಪಿನ ಪುಡಿ ಮಿಶ್ರಣ ಮಾಡಿ ಈ ಪಟ್ಟೆಗಳಲ್ಲಿ ಹಾಕಿ. ರಾತ್ರಿ ವೇಳೆ ಈ ರಾಶಿ ಕೆಳಭಾಗದಿಂದ ಬಸವನ ಹುಳುಗಳು ಹೊರ ಬರುವಾಗ ಈ ಮಿಶ್ರಣದ ಮೇಲೆ ಹರಿದು ಬರುತ್ತವೆ. ಸುಣ್ಣ ಮತ್ತು ಉಪ್ಪಿನ ಪುಡಿ ಮಿಶ್ರಣ ಇವುಗಳ ಮೈಗೆ ಲೇಪನವಾದಾಗ ಮೈಮೇಲೆ ಲೋಳೆ ಉತ್ಪಾದನೆಯಾಗುವುದು ನಿಂತು ಹೋಗುತ್ತದೆ. ಮೈ ಒಣಗಿ ತಲೆಯನ್ನು ಶಂಖದಿಂದ ಹಿಂದೆ ಮುಂದೆ ಎಳೆಯಲು ಸಾಧ್ಯವಾಗದೆ ಅಸುನೀಗುತ್ತವೆ. ಈ ಕ್ರಮದಿಂದ ಬಸವನ ಹುಳುವಿನ ನಿಯಂತ್ರಣ ಸುಲಭ. ಕಪ್ಪು ಬಸವನ ಹುಳುಗಳಿಗೂ ಇದೇ ಕ್ರಮ ಅನುಸರಿಸಿ ನಿಯಂತ್ರಿಸಬಹುದು ಎನ್ನುವುದು ಸಂತೇಶಿವರ ಅನುಭವ. ಈ ಮಿಶ್ರಣವನ್ನು ಮಣ್ಣಿನ ಮೇಲೆ ಹಾಕಿದರೆ ರಸ ಸಾರಕ್ಕೆ ವ್ಯತ್ಯಾಸವಾಗಿ ಬೆಳೆಗಳಿಗೆ ತೊಂದರೆ ಯಾಗುತ್ತದೆ. ಆದಕಾರಣ ಬಾಳೆಮರದ ಪಟ್ಟೆ, ಅಡಕೆ ಪಟ್ಟೆ ಇತ್ಯಾದಿ ಬಳಸಿ ಈ ಸುಣ್ಣಮತ್ತು ಉಪ್ಪಿನ ಪುಡಿಗಳು ನೆಲ ಸೇರುವುದನ್ನು ತಪ್ಪಿಸಬೇಕು.

ವಿಳಾಸ: ಬಿ. ಬಸವರಾಜು ಸಂತೇಶಿವರ, ಚನ್ನರಾಯಪಟ್ಟಣ (ತಾ), ಹಾಸನ ಜಿಲ್ಲೆ -573131, ಫೋ: 08176-239260

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ, ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ದೇಶೀಯ ಆಚರಣೆ

ದೇಶೀ ಸಂಸ್ಕೃತಿ ಗಟ್ಟಿ ಮಾಡುವ ''ಬೆಳದಿಂಗಳ ಹಬ್ಬ''

ನೆಲಮಂಗಲ ತಾಲ್ಲೂಕಿನ ವಕೀಲರಾದ ಶ್ರೀ ಜಯರಾಂ ಅವರು ಮರಸರ ಹಳ್ಳಿಯ ತಮ್ಮ ತೋಟದಲ್ಲಿ ಇದೇ ಮಾರ್ಚ್ 19ರಂದು ವಿನೂತನ 'ಬೆಳದಿಂಗಳ ಹಬ್ಬ' ಒಂದನ್ನು ಏರ್ಪಡಿಸಿದ್ದರು. ಸಾಂಪ್ರದಾಯಿಕ ಸಾವಯವ ಕೃಷಿಯ ಪ್ರಚಾರದಲ್ಲಿ ಕಳೆದ 15 ವರ್ಷಗಳಿಂದಲೂ ತಮ್ಮನ್ನು ತೊಡಗಿಸಿ ಕೊಂಡ ಜಯರಾಂ ಇತ್ತೀಚೆಗೆ ನೆಲ–ಜಲ–ಗಿಡ–ಮರ, ಪರಿಸರ ಸಂರಕ್ಷಣೆ ಮೊದಲಾದ ಜನಪರ ಪರಿಸರವಾದಿ ಚಟುವಟಿಕೆಗಳಲ್ಲೂ ಸಕ್ರಿಯವಾಗಿದ್ದಾರೆ.

ಈ ಕಾರ್ಯಕ್ರಮಕ್ಕೆ ಕೆಲವು ವಿದೇಶೀ ಗಣ್ಯರ ಜೊತೆಗೆ ಬೆಂಗಳೂರು, ದೊಡ್ಡಬಳ್ಳಾಪುರ, ರಾಮನಗರ, ನೆಲಮಂಗಲ, ಆನೇಕಲ್ ತಾಲ್ಲೂಕಿನಿಂದ ಅನೇಕ ಜನಪರ ಸಂಘಟನೆಗಳ ವ್ಯಕ್ತಿಗಳು, ಚಿಂತಕರು ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಯುವ ಕೃಷಿಕರು ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಗಾಯಕ ಡಿ.ಆರ್. ರಾಜಪ್ಪ ಮತ್ತು ರತ್ನರವರು ಪರಿಸರ, ಗಾಳಿ, ನೀರು, ಆಹಾರ, ಗಿಡ–ಮರ, ಪ್ರಾಣಿ–ಪಕ್ಷಿಗಳಿಗೆ ಹೋಲಿಸಿ ಜಾನಪದ ಹಾಡುಗಳನ್ನು ಭಾವಪೂರ್ಣವಾಗಿ ಹಾಡಿದರು. ಮರಸರಹಳ್ಳಿ ಸ್ನೇಹ ಕಲಾವಿದ ಸಂಘ ದವರು ಪರಿಸರ, ನೀರು, ಆರೋಗ್ಯದ ಬಗ್ಗೆ ಕಿರುನಾಟಕವೊಂದನ್ನು ಪ್ರದರ್ಶಿಸಿದರು. ಹೊಸಳಯ್ಯ ಹಾಗೂ ಸಂಗಡಿಗರಿಂದ ಜಾನಪದ ಹಾಡುಗಳು, ಬೆಂಗಳೂರು ದೂರದರ್ಶನ ಕೇಂದ್ರದ ಎಲ್.ಜಿ. ಶಿವಕುಮಾರ್ ಮತ್ತು ವೇಣು, ಇವರಿಂದ 'ಬದುಕಿನ ಬವಣೆ' ಎಂಬ ಮತ್ತೊಂದು ಹಾಸ್ಯಮಿಶ್ರಿತ ಕಿರುನಾಟಕ, ಸೇರಿದ ಜನರಲ್ಲಿ ನಗೆ ಬೀರುವಂತೆ ಮಾಡಿತ್ತು, ಹೆಬ್ಬಾಳ್ ವೆಂಕಟೇಶ್‌ರಿಂದ ಕ್ರಾಂತಿ ಗೀತೆಗಳು, ಆನೇಕಲ್ ಪುರುಷೋತ್ತಮ ಮತ್ತುಗೆಳೆಯರಿಂದ ಕೋಲಾಟ, ಕಡೆಯದಾಗಿ ಮೊಳಗಿದ ಡಣಕ – ನಕ್ಕ, ಡಣಕ – ನಕ್ಕ, ತಮಟೆಯ ಸದ್ದು ಜನರನ್ನು ಮೈಮರೆತು ಕುಣಿದು ಕುಪ್ಪಳಿಸುವಂತೆ ಮಾಡಿತು. ಹೀಗೆ ರಾತ್ರಿ ಮೂರುಗಂಟೆಯವರೆಗೆ ಸಾಂಸ್ಕೃತಿಕ ಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುವಂತೆ ಮಾಡಿತು. ಜೊತೆಗೆ ಸಾವಯವ ಗೊಬ್ಬರ ಉಪಯೋಗಿಸಿ ಬೆಳೆದ ತರಕಾರಿಗಳನ್ನು ಬಳಸಿ ತಯಾರಿಸಿದ ಅವರೆ ಕಾಳು ಸಾಂಬಾರು, ರಾಗಿ ಮುದ್ದೆ, ಕಾಯಿ ಪಲ್ಯೆ, ಪಾಯಸ, ಸೌತೆಕಾಯಿ, ಹೆಸರು ಕಾಳು ಹುಸಲಿ, ಅನ್ನ, ಮಜ್ಜಿಗೆ, ಉಪ್ಪಿನಕಾಯಿ ಜೊತೆಗೆ ಸಾವಯವದಲ್ಲಿ ಬೆಳೆದ ಬಾಳೆಹಣ್ಣು ಜನರ ಉದರಕ್ಕೂ ಮುದ ನೀಡಿತು. ಬೆಳದಿಂಗಳ ಹಬ್ಬದಂತಹ ಇಂತಹ ಕಾರ್ಯಕ್ರಮಗಳೂ ಎಲ್ಲಾ ಗ್ರಾಮಗಳಲ್ಲಿ ನಡೆಯುತ್ತಿದ್ದರೆ ಅಳಿದು ಹೋಗುತ್ತಿರುವ ದೇಶೀಯ ಸಾಂಸ್ಕೃತಿಕ ಮೌಲ್ಯಗಳು ಉಳಿಯುವುದು ಮಾತ್ರವಲ್ಲ, ಗ್ರಾಮೀಣ ಬದುಕಿನಲ್ಲಿ ಇಂದು ಬೇರು ಬಿಡುತ್ತಿರುವ ವಿಲಾಸಿ ಸಂಸ್ಕೃತಿ, ದುಶ್ಚಟಗಳು, ರೈತ ಆತ್ಮಹತ್ಯೆಗಳು, ಜಾತಿ ಕಲಹ ಇತ್ಯಾದಿಗಳು ಕಡಿಮೆಯಾಗಿ, ಗ್ರಾಮೀಣಾಭಿವೃದ್ಧಿಗೆ ಒಂದು ಅಪ್ಪಟ ದೇಶೀಯ ಆಯಾಮ ದೊರೆಯುವುದರಲ್ಲಿ ಸಂಶಯವಿಲ್ಲ. ಆದರೆ ಈ ಕಾರ್ಯಕ್ರಮ ಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಪಟ್ಟಣ ಪ್ರದೇಶದಲ್ಲಿನ ಒಂದು ಕಾರ್ಯಾಗಾರದಂತೆ ವ್ಯವಸ್ಥಿತವಾಗಿ ನಡೆಸಿಕೊಡಲಾಗಿದೆ. ಬದಲಿಗೆ, ಗ್ರಾಮಗಳಲ್ಲಿನ ಒಂದು ಹಬ್ಬ ಅಥವಾ ಜಾತ್ರೆಯ ರೀತಿ ಸ್ವಲ್ಪ 'ಅವ್ಯವಸ್ಥೆ' ಇದ್ದಿದ್ದರೆ ಇಲ್ಲೂ ಕೂಡ ದೇಶೀತನವಿರುತ್ತಿತ್ತು ಎಂಬುದು ಈ ಬೆಳದಿಂಗಳ ಹಬ್ಬದಲ್ಲಿ ಪಾಲ್ಗೊಂಡ ಸಮಾಜ ಕಾರ್ಯಕರ್ತೆ ಸುಜಾತ ಕುಮುಟರ ಅಭಿಪ್ರಾಯ.

ದೇಶೀಯ ಜಾಣ್ಮೆ

ಪ್ರಚೋದಿತ ಪುಷ್ಪಾಂಕುರ

ಬದನೆ ಮತ್ತು ಮೆಣಸಿನ ಗಿಡಗಳು ಸದೃಢವಾಗಿ ಬೆಳೆಯದಿದ್ದಲ್ಲಿ ಹೂಗಳು ತಡವಾಗಿ ಮತ್ತು ಕಡಿಮೆ ಪ್ರಮಾಣದಲ್ಲಿ ಆಗುವುದೆಂದು ತಿಳಿದ ಭಾವನಗರ ಜಿಲ್ಲೆಯ ವಾನೋಟ ಗ್ರಾಮದ ರೈತ ನಾಗಜಿಭಾಯಿ ಬಚುಭಾಯಿ ರಾಥೋರ್ ಒಂದು ಹೊಸ ಪ್ರಯೋಗ ನಡೆಸಿದರು. ಇವರು 50–60 ಇಂಗಳ ಕಾಯಿ *(Balanites roxburgghii)* ಯನ್ನು 24 ಗಂಟೆ ನೀರಿನಲ್ಲಿ ನೆನೆಸಿ (ತೊಗಟೆಯನ್ನು ತೆಗೆದು ಹಾಕಿ) ರಸವನ್ನು ತೆಗೆದು, ಇಂತಹ ಕಾಲು ಕಿಲೋ ರಸವನ್ನು 10 ಲೀ ನೀರಿನಲ್ಲಿ ಬೆರೆಸಿ ದ್ರಾವಣವನ್ನು ಸಿಂಪಡಿಸಿದರೆ ಇದರಿಂದ ಹೆಚ್ಚು ಪ್ರಮಾಣದಲ್ಲಿ ಶೀಘ್ರವಾಗಿ ಹೂ ಅರಳಿ ಇಳುವರಿ ಅಧಿಕವಾಗಿರು ವುದನ್ನು ರಾಥೋರ್ ಕಂಡುಕೊಂಡಿರುವರು.

ಈ ಪ್ರಯೋಗವನ್ನು ಇವರು ಕಳೆದ 20 ವರ್ಷಗಳಿಂದ ಮಾಡುತ್ತಾ ಉತ್ತಮ ಬೆಳೆಯನ್ನು ಪಡೆದಿದ್ದಾರೆ.

ಮೂಲ: ಹನಿ ಬೀ ***Vol.*** *15(3) ಜುಲೈ-ಸೆಪ್ಟೆಂಬರ್, 2004, ಪು.16*

ವಿನೇಗರ್‌ನಿಂದ ಅಧಿಕ ಬೆಳೆ

ಬೆಳೆಕೋಣೆ ಗ್ರಾಮದ ರೈತ ಶ್ರೀ ಭಂಡಾರಿಯವರು, ಬದನೆ, ಸೌತೆಕಾಯಿ ಮತ್ತು ಮೆಣಸಿನ ಬೆಳೆಗಳಲ್ಲಿ ಹೂಬಿಡುವ ಮೊದಲು ಅರ್ಧಲೀಟರ್ ವಿನೇಗರ್‌ನ್ನು 50 ಲೀಟರ್ ದ್ರಾವಣದಲ್ಲಿ ಸೇರಿಸಿ ಸಿಂಪಡಿಸಿ ಶೇ 15ರಷ್ಟು ಅಧಿಕ ಬೆಳೆ ತೆಗೆದಿದ್ದಾರೆ. ಇದೇ ರೀತಿಯಲ್ಲಿ ಎಲೆ ಅರಳುವ ಮುನ್ನ ಎಲೆಕೋಸಿಗೆ 100 ಲೀಟರ್ ನೀರಿನಲ್ಲಿ ಬೆರೆಸಿದ ಅರ್ಧ ಲೀಟರ್ ವಿನೇಗರ್ ಸಿಂಪಡಿಸು ವುದರಿಂದ ಶೇ10ರಷ್ಟು ಅಧಿಕ ಬೆಳೆ ಪಡೆದಿದ್ದಾರೆ. ಶುದ್ಧ ಹಣ್ಣಿನಿಂದಲೇ ವಿನೇಗರ್ ತಯಾರಿಸಬೇಕೆಂದೇನಿಲ್ಲ, ಯಾವುದೇ ಹಣ್ಣಿನ ರಸ ತೆಗೆದು ಕೆಲಕಾಲ ಇಟ್ಟರೂ ಅದು ಹುಳಿ ಬಂದಾಗ 'ವಿನೇಗರ್' ರೀತಿ ಕೆಲಸ ಮಾಡುತ್ತದೆ. ಸಕ್ಕರೆ ಪಾನಕವನ್ನು ಕೆಲ ದಿನ ಇಟ್ಟರೂ ಕೂಡ ಕೊಳೆತು ಅದರಿಂದ ವಿನೇಗರ್ ಆಗುತ್ತದೆ ಎಂಬುದು ಭಂಡಾರಿಯವರ ಅಭಿಪ್ರಾಯ.

ಆಧಾರ: ಪ್ರಜಾವಾಣಿ, 02, ಫೆಬ್ರವರಿ, 2005

ಪಾರ್ಥೇನಿಯಂ ಗೊಬ್ಬರ

ರಾಸಾಯನಿಕ / ಭೌತಿಕ ಅಥವಾ ಜೈವಿಕ ವಿಧಾನಗಳಿಂದ ಪಾರ್ಥೇನಿಯಂ ಕಳೆಯ ನಿಯಂತ್ರಣವು ಸುಲಭವೇನಲ್ಲ. ಹೊಲಗಳಲ್ಲಿ ರಾಕ್ಷಸನಂತೆ ಹಬ್ಬುವ ಈ ಕಳೆ ನಿಯಂತ್ರಣಕ್ಕೆ ಹೈದರಾಬಾದಿನ ICRISAT (International Crop Research Institute for Semi Arid Tropics) ಸಂಸ್ಥೆ ಹೊಸ ಪರಿಹಾರ ಕಂಡು ಹಿಡಿದಿದೆ. ಪಾರ್ಥೇನಿಯಂ ಕಳೆಯನ್ನು ಉತ್ತಮ ಎರೆಹುಳು ಗೊಬ್ಬರವನ್ನಾಗಿ ಮಾಡುವ ಸರಳ ಪದ್ಧತಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ರೀತಿಯಾಗಿ ತಯಾರಿಸಿದ ಪಾರ್ಥೇನಿಯಂ ಎರೆಹುಳುಗೊಬ್ಬರ ಅಧಿಕ ಪ್ರಮಾಣದಲ್ಲಿ ಇಂಗಾಲ, ಸಾರಜನಕ ಪ್ರಮಾಣ (C:N Ratio) ಅಂಶವನ್ನು ಹೊಂದಿದೆ. ಹೀಗೆ ತಯಾರಿಸಿದ ಗೊಬ್ಬರದಲ್ಲಿನ ಪಾರ್ಥೇನಿಯಂ ಬೀಜಗಳು ಪುನರುತ್ಪಾದನೆ ಶಕ್ತಿಯನ್ನು ಕಳೆದು ಕೊಳ್ಳುವುದೆಂದು ತಿಳಿದು ಬಂದಿರುತ್ತದೆ. ಆಂಧ್ರಪ್ರದೇಶದ ಕೆಲ ಸ್ವಸಹಾಯ ಗುಂಪುಗಳು ಈಗಾಗಲೇ ಟನ್‌ಗಟ್ಟಲೆ ಪಾರ್ಥೇನಿಯಂ ಸಾವಯವ ಗೊಬ್ಬರ ತಯಾರಿಸಿ ಪ್ರತಿ ಕೆ.ಜಿಗೆ ರೂ.5ರಂತೆ ಮಾರಾಟ ಮಾಡಿ ಲಾಭಗಳಿಸುತ್ತಿವೆ.

(Ed) P. Vivekanandan, p.1

ಹಾವಿನ ಕಡಿತಕ್ಕೆ ಮದ್ದು



ಪಶುಗಳಲ್ಲಿ ಊದಿದ ಕಣ್ಣುರೆಪ್ಪೆ, ತಣ್ಣನೆ ಮೈ, ಬೆವರು, ಚರ್ಮದ ಬಣ್ಣದಲ್ಲಿ ವ್ಯತ್ಯಾಸ ಹಾಗೂ ಮೈಮೇಲೆ ಬೊಕ್ಕೆ ಏಳುವುದು ವಿಷದ ಹಾವು ಕಡಿತದ ಲಕ್ಷಣ ಗಳು. ಶೀಘ್ರ ಉಪಚಾರಕ್ಕಾಗಿ ಮಧುರೈ ಜಿಲ್ಲೆಯ ಸಾಂಪ್ರದಾಯಿಕ ವೈದ್ಯ ಶ್ರೀ ಅಯ್ಯವು ಒಂದು ಪರಿಣಾಮಕಾರಿ ಲೇಹ್ಯ ತಯಾರಿಸಿ ಬಳಸುತ್ತಾರೆ. ಇವರು ಸಮ ಪ್ರಮಾಣದಲ್ಲಿ ಮಧುನಾಶಿನಿ *(Gymnema sylvestris)*, ನೆಲ ಬೇವು *(Andrographis paniculata)*, *ಕೆಂಪು ಎಲೆ ಗಿಡ (Poinsettia pulcherrima)*, *ಆಕಾಶ ಗರುಡ (Corallacarpus epigaeus)*, ಈಶ್ವರಬಳ್ಳಿ *(Aristolochia indica)* *ಹಾವು ಮೆಕ್ಕೆ ಕಾಯಿ (Citrullus colocynthus)*, *ಚಿಕ್ಕಾ ಚಿರಾಯತ (Evicostamma byssopitotium)* ಮತ್ತು *ಬಿಳೀ ಉಪ್ಪಿ ಗಿಡ (Azima tetracautha)* ಬಳಸಿ ಲೇಹ್ಯ ತಯಾರಿಸುತ್ತಾರೆ. ಈ ಲೇಹ್ಯವನ್ನು ಅರ್ಧ ಲೀಟರ್ ಬಿಸಿ ನೀರಿನಲ್ಲಿ ಕರಗಿಸಿ ದಿನಕ್ಕೆರಡು ಬಾರಿ ನಾಲ್ಕು ದಿನಗಳವರೆಗೆ ಕುಡಿಸುತ್ತಾರೆ. ಈ ಉಪಚಾರದ ಸಂದರ್ಭದಲ್ಲಿ ಪಶುಗಳಿಗೆ ಸ್ನಾನ ಮಾಡಿಸಬಾರದೆಂದು ತಿಳಿಸುತ್ತಾರೆ.

*ಮೂಲ: ಹನಿಬೀ. **Vol.15** (3), ಜುಲೈ–ಸೆಪ್ಟೆಂಬರ್ 2004, ಪು 14.*

ಪಶುಗಳಲ್ಲಿ ಹೊಟ್ಟೆಯುಬ್ಬರ

ಪಶುವಿನ ಹೊಟ್ಟೆಯ ಗಾತ್ರದಲ್ಲಿ ವ್ಯತ್ಯಾಸವಾಗಿ ಊದಿಕೊಳ್ಳುವುದು, ಮೂಗು ಮತ್ತು ಕಣ್ಣುಗಳಿಂದ ನೀರು ಸುರಿಯುವುದು, ಉಸಿರಾಟದ ತೊಂದರೆ, ಪದೇ ಪದೇ ಕೂತು–ಎದ್ದು ನಿಲ್ಲುವುದು ಹಾಗೂ ಕಿಬ್ಬೊಟ್ಟೆಯನ್ನು ಒದೆದುಕೊಳ್ಳುವುದು ಈ ಬಾಧೆಯ ಲಕ್ಷಣಗಳು. ಪಶುಗಳು ಸಾಮಾನ್ಯವಾಗಿ ಅಧಿಕ ಪ್ರಮಾಣದಲ್ಲಿ ಬೇಳೆ ಕಾಳು ಅಥವಾ ಅಳಿದುಳಿದ ಹಳಸಿದ ಅಡಿಗೆಯನ್ನು ತಿಂದಾಗ ಹೊಟ್ಟೆಯೂದಿಕೊಂಡು ತೊಂದರೆ ಅನುಭವಿಸುತ್ತವೆ.

ಇದರ ಚಿಕಿತ್ಸೆಗಾಗಿ 25 ಗ್ರಾಂ ಒಣ ಶುಂಠಿ, 10 ಗ್ರಾಂ ಮೆಣಸು, 50 ಗ್ರಾಂ ವೀಳ್ಯದೆಲೆ ಮತ್ತು 200 ಗ್ರಾಂ ಮಂಗರವಳ್ಳಿ ಮರ *(Cissus quadrangularis)* ದ ಕಾಂಡಗಳನ್ನು ಚೆನ್ನಾಗಿ ಅರೆದು ಚೆಂಡಿನ ಗಾತ್ರದಲ್ಲಿ ಮೂರು ಹೊತ್ತು ತಿನ್ನಿಸಬೇಕು. ಹೀಗೆ ಪ್ರತಿಸಲ ತಿನ್ನಿಸಿದ ಅರ್ಧಗಂಟೆಯ ಅಂತರದಲ್ಲಿ 50 ಗ್ರಾಂ ಉಪ್ಪನ್ನು ಅರ್ಧಲೀಟರ್ ಬಿಸಿ ನೀರಲ್ಲಿ ಕರಗಿಸಿ ಕುಡಿಸುವುದರಿಂದ ಪಶುಗಳಲ್ಲಿ ಈ ಬಾಧೆ ಕಡಿಮೆಯಾಗುತ್ತದೆ ಎಂದು ತಿರುಪ್ಪುವನಂದ ಎಸ್.ಎನ್. ಆರುಮ್ಗಂ ತಿಳಿಸಿರುತ್ತಾರೆ.

ಈ ಬಾಧೆಯನ್ನು ನಿವಾರಿಸಲು ತಮಿಳುನಾಡಿನ ಇಲಪ್ಪಕುಡಿಯ ಆರ್. ರಾಮುರವರ ಮತ್ತೊಂದು ಪದ್ಧತಿ ಹೀಗಿದೆ. ಇಂಗು, ಒಣಶುಂಠಿ, ಮೆಣಸು, ಹಿಪ್ಪಲಿ (ತಲಾ 10 ಗ್ರಾಂ)ಯನ್ನು 250 ಗ್ರಾಂ ತಾಳೆಮರದಿಂದ ಮಾಡಿದ ಬೆಲ್ಲಕ್ಕೆ ಸೇರಿಸಿ ಚೆನ್ನಾಗಿ ಅರೆದು ಬಾಳೆ ಎಲೆಯಲ್ಲಿ ಸುತ್ತಿ ಪಶುವಿಗೆ ತಿನ್ನಿಸಿದರೆ ಹೊಟ್ಟೆಯುಬ್ಬರದಿಂದ ಉಪಶಮನ ಪಡೆಯುವುದಾಗಿರುತ್ತದೆ.

ಮೂಲ: ***Indigenous Veterinary Medicine - A Reference Book***

ಹಸುಗಳ ಮೂಳೆಯ ಮುರಿತಕ್ಕೆ

ಗುಜರಾತಿನ ಜಮ್ನಾನಗರ ಜಿಲ್ಲೆಯ ಮಂಡೋವ್‌ಭಾಯ್ ವೀರಭಾಯಿ ವಿರೋಜ ಅವರು ಹಸುಗಳ ಮೂಳೆಯ ಮುರಿತಕ್ಕೆ ಈ ಕೆಳಗಿನ ಸರಳ ಸಾಂಪ್ರದಾಯಿಕ ಪರಿಹಾರ ಹೇಳುತ್ತಿರುವರು.

ಒಳ್ಳೆತಂಗಡಿ *(Cassia auriculata)*, ಹುಣಸೇಮರ *(Tamarindus indica)* ಮತ್ತು ಒಳ್ಳೇ ಬೇವು *(Azadirachta indica)* ಮರದ ಎಲೆಗಳನ್ನು (ಪ್ರತಿಯೊಂದೂ 25 ಗ್ರಾಂ) ಬೇರೆ ಬೇರೆಯಾಗಿ ಪುಡಿ ಮಾಡಿ ಒಂದು ಕೆ.ಜಿ. ಕುದಿಸಿದ ಎಳ್ಳೆಣ್ಣೆಯ ಜೊತೆ ಬೆರೆಸಬೇಕು. ನಂತರ ಅರಿಶಿನ, ಕಲ್ಲು ಉಪ್ಪು, ಬ್ರಹ್ಮದಂಡೆ *(Echinops echinatus)*, ಕುರಂಟಿಕೆ *(Barleria priorities)* ಮತ್ತು ಕಾಕನ ಖಂಡಿ (ಪ್ರತಿಯೊಂದೂ 25 ಗ್ರಾಂ) ಇವುಗಳನ್ನು ಸೇರಿಸಿ, ಹತ್ತು ನಿಮಿಷಗಳ ಕಾಲ ಕುದಿಸಬೇಕು. ಉಗುರುಬೆಚ್ಚಗಾದ ಮಿಶ್ರಣವನ್ನು ಶೋಧಿಸಬೇಕು.

ಶುಭ್ರವಾದ ಬಟ್ಟೆಯನ್ನು ಶೋಧಿಸಿದ ಮಿಶ್ರಣದಲ್ಲಿ ಅದ್ದಿ, ಅದನ್ನು ಮೂಳೆ ಮುರಿತದ ಜಾಗಕ್ಕೆ ಗಟ್ಟಿಯಾಗಿ ಕಟ್ಟಬೇಕು. ಇದರ ಮೇಲೆ ಬೇರೆಯ ಬಟ್ಟೆಯಿಂದ ಬ್ಯಾಂಡೇಜ್ ಮಾಡಬೇಕು. ಮಾರನೆಯ ದಿನ ಮೇಲಿನ ಬಟ್ಟೆಯನ್ನು ಬಿಚ್ಚಿ ಒಳಗಿನ ಬಟ್ಟೆಯ ಮೇಲೆ ಎಣ್ಣೆಯನ್ನು ಸವರಿ, ಮತ್ತೆ ಬ್ಯಾಂಡೇಜ್ ಮಾಡಬೇಕು. ಈ ಚಿಕಿತ್ಸಾ ಕ್ರಮವನ್ನು ಹತ್ತು ದಿನಗಳ ಕಾಲ ಮುಂದುವರೆಸಿ ಬ್ಯಾಂಡೇಜನ್ನು 25ನೆಯ ದಿನ ಬಿಚ್ಚಬೇಕು.

ಬಹಳ ಮೂಳೆಮುರಿತಗಳಾಗಿದ್ದರೆ ಬ್ಯಾಂಡೇಜನ್ನು ಸ್ವಲ್ಪ ಹೆಚ್ಚಿನ ದಿನಗಳ ಕಾಲ ಬಿಚ್ಚಬಾರದು. ಮಾಂಡೋವ್‌ಭಾಯಿಯವರು ಈ ಚಿಕಿತ್ಸಾ ಕ್ರಮದಿಂದ ಸುತ್ತಮುತ್ತಲಿನ ಹಲವಾರು ಹಸುಗಳಿಗೆ ಚಿಕಿತ್ಸೆ ನೀಡಿ ಮೂಳೆ ಸರಿಪಡಿಸಿದ್ದಾರೆ.

*ಮೂಲ: ಹನಿಬೀ, **Vol.15(3)**, ಸೆಪ್ಟೆಂಬರ್ 2004, ಪು. 16*

ಕರುಗಳು ಉಚ್ಚುವುದಕ್ಕೆ ಪರಿಹಾರ

ಕರುಗಳು ಮಣ್ಣನ್ನು ಸೇವಿಸುವುದರಿಂದ, ಹೆಚ್ಚು ಹಾಲು ಕುಡಿಯುವುದರಿಂದ, ನಿಂತ ಅಥವ ಮಲಿನವಾದ ನೀರನ್ನು ಕುಡಿಯುವುದರಿಂದ, ಹೊಟ್ಟೆಯಲ್ಲಿ ಹುಳುಗಳು ಇದ್ದರೆ ಅವುಗಳಲ್ಲಿ ಜ್ವರ, ಭೇದಿ, ಬತ್ತಿದ ಕಣ್ಣುಗಳು, ಸರಿಯಾಗಿ ಮೇವು ತಿನ್ನದಿರುವುದು ಮತ್ತು ಮಂಕಾಗುವುದು, ಈ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಪಿಲ್ಲಾಯರ್ ಕುಪ್ಪಮ್ ಊರಿನವರಾದ ಅಶೋಕ ಕುಂಡೆಯವರು ಇದಕ್ಕೆ ತಾವೇ ಮುಂದಿನ ಪರಿಹಾರ ಕಂಡುಕೊಂಡಿದ್ದಾರೆ.

ಎರಡು ಬಜೆ ಎಲೆಗಳು *(Acorus calamus)* 50 ಗ್ರಾಂ ಶುಂಠಿ *(Zingiber officinale)*, 200 ಗ್ರಾಂ ಸೀಬೆಕಾಯಿ ಮರದ ಎಲೆಗಳು *(Psidium guajava)* ಇವುಗಳನ್ನು ಪುಡಿ ಮಾಡಿ ಉಂಡೆ ಮಾಡಿ ಹಸುಗಳಿಗೆ ಒಂದೆರಡು ಬಾರಿ ಕೊಟ್ಟರೆ ಸಾಕು ಕರುಗಳು ಉಚ್ಚು (Scour)ವುದು ನಿಲ್ಲುತ್ತದೆ ಎಂಬುದು ಅವರ ಅಭಿಪ್ರಾಯ.

ಮೂಲ: ***Indegenous veterinary medicine - A reference book.***

P. Vivekanandan, Page No.7

ತಾರಸಿಯ ಮೇಲೊಂದು ಸೋಲಾರ್ ಡ್ರೈಯರ್



ಮಲೆನಾಡ ಕೃಷಿಕರಿಗೆ ಮಳೆಗಾಲದಲ್ಲಿ ಸಿಗುವ ಅಡಿಕೆ, ಜಾಯಿಕಾಯಿ ಮುಂತಾದವುಗಳನ್ನು ಒಣಗಿಸಲು ಡ್ರೈಯರ್‌ಗಳು ಬೇಕೇ ಬೇಕು. ಡ್ರೈಯರ್ ತಯಾರಿಕೆ ಅವರವರ ಅಗತ್ಯಕ್ಕೆ ತಕ್ಕಂತೆ ಮಾಡಬೇಕು. ಏಕೆಂದರೆ ಒಬ್ಬ ಕೃಷಿಕನಿಗೆ ಬೇಕಾಗುವ ಡ್ರೈಯರ್ ಇನ್ನೊಬ್ಬನಿಗೆ ಬೇಡದೆ ಇರಬಹುದು. ಬಹಳ ಕಡಿಮೆ ಖರ್ಚಿನಲ್ಲಿ ಮಾಡಬಹುದಾದ ಡ್ರೈಯರ್‌ಗಳೆಂದರೆ ಸೌರಶಕ್ತಿಯಿಂದ ಪ್ರವರ್ತಿಸುವಂತಹವುಗಳು. ಬೇರೆ ರೀತಿಯ ಡ್ರೈಯರ್ ಗಳಿಗೆ ಇಂಧನಗಳ ಅಗತ್ಯವಿರುವುದಾದರೆ ಈ 'ಸೋಲಾರ್ ಡ್ರೈಯರ್' ಗಳಿಗೆ ಇಂಧನದ ಅಗತ್ಯವೇ ಇಲ್ಲ. ನಮಗೆ ಬೇಕಾದ ಡ್ರೈಯರ್‌ನ್ನು ನಾವೇ ವಿನ್ಯಾಸಗೊಳಿಸಿ ತಯಾರಿಸಬಹುದು. ಸೌರಶಕ್ತಿಯನ್ನು ಬಳಸುವ 'ವೈಟ್ ಹೌಸ್' ಎಂಬ ರೀತಿಯ ಡ್ರೈಯರ್‌ನ ಹೊಸ ಮಾದರಿ ಇಲ್ಲಿದೆ.

ಎಡನಾಡಿನ ದೊಡ್ಡಮಾಣಿ ಕೃಷ್ಣಭಟ್ಟರು ಕಳೆದ ವರ್ಷ ತಮ್ಮ ಅಂಗಳದಲ್ಲಿ 'ವೈಟ್ ಹೌಸ್' ವೊಂದನ್ನು ನಿರ್ಮಿಸಿದ್ದರು. ಸೌರ ಶಕ್ತಿಯಿಂದ ಕಾರ್ಯ ನಿರ್ವಹಿಸುವ ಈ ಡ್ರೈಯರ್‌ನ ಉಪಯೋಗದಲ್ಲೇನೂ ತೊಂದರೆಯಿರಲಿಲ್ಲ, ಇರುವೆಗಳು ಬಂದು ಅಡಿಕೆಯನ್ನು ಕೆರೆಯುವುದು ಹಾಗೂ ನೆಲದಿಂದ ಪಸೆ (ತೇವಾಂಶ) ಬರುವ ಸಮಸ್ಯೆಗಳು ಕಂಡವು. ಡ್ರೈಯರ್‌ನ್ನು ತಾರಸಿಯ ಮೇಲೆ ನಿರ್ಮಿಸಿದರೆ ಈ ಸಮಸ್ಯೆಗಳು ಪರಿಹಾರ ವಾಗಬಹುದೆಂಬ, ಅವರ ಮಗ ಶ್ಯಾಮರಾಜರ ಸಲಹೆಯಿಂದ ತಮ್ಮ ಮನೆಯ ಮೇಲೆ ಡ್ರೈಯರ್ ನಿರ್ಮಿಸಿದರು. ಕಳೆದ ವರ್ಷ ತಾರಸಿಯ ಮೇಲೆ ಕಬ್ಬಿಣದ ಪೈಪುಗಳನ್ನು ಕಲ್ಲುಗಳ ಸಹಾಯದಿಂದ ನಿಲ್ಲಿಸಿ ಕಂಬಗಳನ್ನು ರಚಿಸಿದರು. ಅದರ ಮೇಲೆ ಅಡಿಕೆ ಮರದ ಸಲಿಕೆಗಳನ್ನು ಬಾಗಿಸಿ ಕಟ್ಟಿ ತಲೆಕೆಳಗಾದ 'U' ಆಕಾರದಲ್ಲಿ ಡ್ರೈಯರ್‌ನ ಅಸ್ಥಿಪಂಜರ ಸಿದ್ಧಗೊಳಿಸಿದರು. ಅದರ ಮೇಲೆ ಪಾಲಿಥೀನ್ ಶೀಟುಗಳ ಹೊದಿಕೆ ಇರುವುದರಿಂದ ಮಳೆ ಬಂದರೂ ನೀರು ಇದರ ಒಳಗೆ ನುಗ್ಗದಂತೆ ಸಿಮೆಂಟ್‌ನಿಂದ ಸಣ್ಣ ಕಟ್ಟೆಯನ್ನು ನಿರ್ಮಿಸಿದರು. ಸರಾಗವಾಗಿ ಗಾಳಿಯ ಸಂಚಾರ ಸಿಗಲು ಪಾಲಿಥೀನ್ ಶೀಟ್ ಹೊದಿಸುವಾಗ ತಾರಸಿಯ ನೆಲದಿಂದ ಸ್ವಲ್ಪ ಜಾಗ ಬಿಟ್ಟು ಹೊದೆಸಿದರು. ಗಾಳಿಯ ಸಂಚಾರ ಸಿಕ್ಕರೆ ಬೆಳೆಗಳು ಬೇಗನೆ ಒಣಗಬಹುದೆಂಬ ನಂಬಿಕೆ ಇವರದಾಗಿದೆ.

ಕೆಲವೊಂದು ಕಡೆ ಈಗಾಗಲೇ ಯಶಸ್ವಿಯಾಗಿರುವ ಇದೇ ಡ್ರೈಯರ್‌ನ ನೆಲದ ಮೇಲಿನ ಮಾದರಿಯಲ್ಲಿ ಇಷ್ಟು ಉಷ್ಣತೆ ಸಿಗಲಾರದೆಂದು ಶ್ಯಾಮರಾಜರ ಅನಿಸಿಕೆ. 'ನೆಲದ ಮೇಲೆ ಮಾಡಿದ ಡ್ರೈಯರ್‌ಗಿಂತಲೂ ತಾರಸಿ ಮೇಲಿನ ಡ್ರೈಯರ್‌ನಲ್ಲಿ ಸುಮಾರು ಐದು ಡಿಗ್ರಿಯಷ್ಟು ಹೆಚ್ಚು ಬಿಸಿಯಿರುತ್ತದೆ. ಮೊನ್ನೆ ತಾನೇ ಒಣಗಲು ಹಾಕಿದ ಹಣ್ಣಡಿಕೆ, ಬಣ್ಣ ಹಾಗೂ ತೇವಾಂಶ ಕಳಕೊಂಡಿದೆ' ಎಂದು ಇವರು ಹೇಳುತ್ತಾರೆ. ಸಾಮಾನ್ಯವಾಗಿ ಅಂಗಳದಲ್ಲಿ ಹಾಕಿದ ಅಡಿಕೆ ಒಣಗಲು ಸುಮಾರು ಐವತ್ತು ಬಿಸಿಲು ದಿನ ಬೇಕಾದರೆ ಇದರಲ್ಲಿ ಇಪ್ಪತ್ತು–ಇಪ್ಪತ್ತೈದು ಬಿಸಿಲು ದಿನ ಸಾಕು. ಕೃಷ್ಣಭಟ್ಟರು ಇದನ್ನು ರಬ್ಬರ್ ಹಾಳೆಗಳನ್ನು ಒಣಗಿಸಲು ಕೂಡ ಬಳಸುತ್ತಾರೆ. ಹದಿನೈದು ದಿನಗಳಲ್ಲಿ ರಬ್ಬರ್‌ಶೀಟ್ ಒಣಗಿಸಲಾಗುತ್ತದೆಯೆನ್ನುತ್ತಾರೆ ಇವರು. ಇದೇ ಮಾದರಿಯನ್ನು ತಮ್ಮ ತಾರಸಿಯ ಮೇಲೆ ನಿರ್ಮಿಸಿ ವೆನಿಲ್ಲಾ ಒಣಗಿಸುವ ಇರಾದೆಯೂ ಇವರಿಗೆ ಇದೆಯಂತೆ.

ಸೂರ್ಯಕಾಂತಿ ಕೃಷಿಗೆ 'ರೋಟಾವೇಟರ್'ಗಳು

ಸಾಮಾನ್ಯವಾಗಿ ಸೂರ್ಯಕಾಂತಿ, ಜೋಳ ಮತ್ತು ಹತ್ತಿ ಬೆಳೆಗಳನ್ನು ಬೆಳೆಯುವ ರೈತರು ಫಸಲು ಕಟಾವು ನಂತರ ಅದರ ಕಟ್ಟಿಗೆಗಳನ್ನು ಆಯ್ದು ರಾಶಿ ಹಾಕಿ ಬೆಂಕಿ ಇಡುವುದು ರೂಢಿ. ಅದರ ಬದಲು ಅವುಗಳನ್ನು ಕತ್ತರಿಸಿ ಭೂಮಿಯಲ್ಲಿ ಸೇರಿಸಿ ಮಣ್ಣಿನ ಫಲವತ್ತತೆ ಹೆಚ್ಚಿಸಬಹುದು. ಆದರೆ ಇದು ಹೆಚ್ಚು ತ್ರಾಸದಾಯಕ ಹಾಗು ಸಮಯ ಹಿಡಿಯುವ ಕೆಲಸ. ಇದಕ್ಕಾಗಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಯಲ್ಲಾಪುರ ಗ್ರಾಮದ ಸಾವಯವ ಕೃಷಿಕರಾದ ಪ್ರಕಾಶದಾನ ರೆಡ್ಡಿ 'ರೋಟಾವೇಟರ್' ಎಂದು ಕರೆಯುವ ಉಪಕರಣವೊಂದನ್ನು ರೂಪಿಸಿದ್ದಾರೆ. ಹರಗುವ ಕುಡಗಳನ್ನು ಜೋಡಿಸಿ ಸಿದ್ಧಪಡಿಸಿರುವ ಈ ಉಪಕರಣದಿಂದ ಎತ್ತುಗಳನ್ನು ಬಳಸಿ ದಿನವೊಂದಕ್ಕೆ 3 ರಿಂದ 4 ಎಕರೆ ಪ್ರದೇಶದ ಸೂರ್ಯಕಾಂತಿಯನ್ನು ಸುಲಭವಾಗಿ ಕತ್ತರಿಸಿ ಮಣ್ಣಿನಲ್ಲಿ ಸೇರಿಸಬಹುದಾಗಿದೆ. ಎಲ್ಲಾ ತರಹದ ಮಣ್ಣಿನಲ್ಲಿ ಕಾರ್ಯ ನಿರ್ವಹಿಸುವ ಈ ಉಪಕರಣ ತಯಾರಿಸಲು 2500 ರೂ. ವೆಚ್ಚ ತಗುಲಿದೆ. ಅದೇ ರೀತಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಬನ್ನಿಕೊಪ್ಪದ ಸಿದ್ಧಣ್ಣ ಎರಾಸಿಯವರು ಟ್ರಾಕ್ಟರ್‌ನಿಂದ ಚಾಲಿಸುವ ರೋಟಾವೇಟರ್‌ವೊಂದನ್ನು ಅಭಿವೃದ್ಧಿ ಪಡಿಸಿದ್ದಾರೆ. 10 ಅಡಿ ಉದ್ದದ 12 ಹರಿತ ಕುಡಗಳನ್ನು ಬಳಸಿ ಸಿದ್ಧಪಡಿಸಿರುವ ರೋಟಾವೇಟರ್‌ನಿಂದ ದಿನನಿತ್ಯ 8 ರಿಂದ 10 ಎಕರೆ ಪ್ರದೇಶದ ಸೂರ್ಯಕಾಂತಿಯನ್ನು ಕತ್ತರಿಸಿ ಮಣ್ಣಿಗೆ ಸೇರಿಸಬಹುದು, ಒಂದು ಎಕರೆ ಪ್ರದೇಶದಲ್ಲಿ ಈ ಕಾರ್ಯ ನಿರ್ವಹಿಸಲು ಟ್ರಾಕ್ಟರ್‌ಗೆ ಒಂದು ಲೀಟರ್ ಡೀಸೆಲ್ ಬೇಡುವ ಈ ಉಪಕರಣ ತಯಾರಿಕೆಗೆ ತಗಲುವ ವೆಚ್ಚ 8 ರಿಂದ 12 ಸಾವಿರವಾಗಿದೆ.

*ವಿ.ಸೂ.: ನಾಲ್ಕನೇ ಸುತ್ತಿನ **NIF** ಸ್ಪರ್ಧೆಗೆ ಈ ಆವಿಷ್ಕಾರಗಳನ್ನು ಕಳುಹಿಸಲಾಗಿದೆ.*

ಜೀವನ ಸಮೃದ್ಧಿಗೆ ಸಾಕು ಒಂದೇ ಎಕರೆ ಕೃಷಿ!

ಲೇಖಕ: ಪ್ರಹ್ಲಾದ್


ಜೀವನ ಸಮೃದ್ಧಿಗೆ ಒಂದೇ ಎಕರೆ ಸಾಕು! ಇದು ಆಶ್ಚರ್ಯವಾದರೂ ನಿಜ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಲಾನಯನ ವಿಭಾಗದ ಮುಖ್ಯಸ್ಥರು ಮತ್ತು ಹಿರಿಯ ವಿಜ್ಞಾನಿಗಳಾದ ಡಾ. ರುದ್ರಾರಾಧ್ಯ ಅವರು ಬಾವಿಕೆರೆ ಸಂಶೋಧನಾ ಕೇಂದ್ರದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಿಂದ ಬಹು ವಿಧ ಬೆಳೆಗಳನ್ನು ಜಲಾನಯನ ಅಭಿವೃದ್ಧಿಮೂಲಕ ಸಮಗ್ರ ಬೆಳೆ ಪದ್ಧತಿಯಿಂದ ಯಶಸ್ವಿಯಾಗಿ ಬೆಳೆದು ತೋರಿಸಿದ್ದಾರೆ. ಸದ್ಯದಲ್ಲಿ ಸಾಮಾನ್ಯವಾಗಿ ರೈತರು ಅನುಸರಿಸುತ್ತಿರುವ ರಾಸಾಯನಾಧಾರಿತ ಏಕ ಬೆಳೆ ಕೃಷಿಗಿಂತ ಈ ಬೇಸಾಯ ಭಿನ್ನವಾದುದು. ಕೃಷಿಯಲ್ಲಿ ಬಿತ್ತನೆಯಿಂದಾರಂಭಿಸಿ ಕೊಯ್ಲಿನವರೆಗೂ ಅನಿಶ್ಚಿತತೆ ಹಾಗೂ ಆತಂಕಗಳು ಇದ್ದದ್ದೇ. ಅಕಸ್ಮಾತ್ ಏಕ ಬೆಳೆ ಕೃಷಿ ಕೈಕೊಟ್ಟರೆ? ವರ್ಷಪೂರ್ತಿ ಜಂಜಾಟ ತಪ್ಪಿದ್ದಲ್ಲ. ಆದರೆ ಇಲ್ಲಿ ವಿವರಿಸುವ ಜಲಾನಯನಾಧಾರಿತ, ಸಮಗ್ರ ಸಾವಯವ ಕೃಷಿ ಮಾದರಿಗೆ ಆತಂಕ ಮತ್ತು ಅನಿಶ್ಚಿತತೆಯ ಭಯವಿಲ್ಲ. ಬಹುವಿಧ ಬೆಳೆ, ವರ್ಷಪೂರ್ತಿ ಉತ್ಪನ್ನ. ಸಂಪೂರ್ಣ ಬೆಳೆ ನಾಶವಾದೀತೆಂಬ ಭಯವಿಲ್ಲ. ಜಮೀನಿನ ಉದ್ದಗಲಕ್ಕೂ ಲಭ್ಯವಾಗುವ ಗಾಳಿ, ಬೆಳಕು, ನೀರು ಮತ್ತು ಪೋಷಕಾಂಶಗಳ ಸಂಪೂರ್ಣ ಬಳಕೆ ಇಲ್ಲಿ ಸಾಧ್ಯವಾಗಿದೆ. ದೈನಂದಿನ ಅವಶ್ಯಕತೆಗೆ ಬೇಕಾದ ಆಹಾರ, ಹಾಲು, ಹಣ್ಣು ನಾರು, ಹೂವು, ಮೇವು, ಉರುವಲು, ಮೀನು ಎಲ್ಲವೂ ಇಲ್ಲಿ ಸಿಗುತ್ತವೆ. ಇದು ದೇಶದಲ್ಲೇ ವಿನೂತನ ಪ್ರಯತ್ನವಾಗಿದ್ದು, ಬಾವಿಕೆರೆ ಕೃಷಿ ಸಂಶೋಧನಾ ಕೇಂದ್ರದತ್ತ ಇಂದು ರೈತರು, ರಾಜಕಾರಣಿಗಳು, ಸ್ವಯಂಸೇವಾ ಸಂಸ್ಥೆಗಳು, ಮಾಧ್ಯಮಗಳೂ ತಿರುಗುವಂತಾಗಿವೆ. ಈ ಮಾದರಿ, ಮಳೆಯಾಶ್ರಿತ ರೈತರಿಗೆ ವಿಶೇಷವಾಗಿ ಅನುಕೂಲಕರವಾಗಿದೆ. ಮೇಲ್ಪದರದ ಫಲವತ್ತಾದ ಮಣ್ಣು ಕೊಚ್ಚಿ ಹೋಗದಂತೆ ಇಳಿಜಾರಿಗೆ ಅಡ್ಡಲಾಗಿ ಬದುಗಳನ್ನು ನಿರ್ಮಿಸಿ ಹನಿ ಹನಿ ನೀರನ್ನು ಜಮೀನಿನಲ್ಲೇ ಇಂಗಿಸುವುದು ಮತ್ತು ಸೂಕ್ತ ನೀರಿನ ಹರಿವುಗಳನ್ನು ರಚಿಸಿ ಕೃಷಿ ಹೊಂಡದಲ್ಲಿ ನೀರು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ನೀರು ಕೈತೋಟದ ತರಕಾರಿ ಬೆಳೆಗೂ ಹಾಗು ಮೀನು ಸಾಕಣೆಗೂ ಬಳಸಲು ವ್ಯವಸ್ಥೆ ಮಾಡಲಾಗಿರುತ್ತದೆ.

ಜಮೀನಿನ ಸುತ್ತ ಅಂಚಿನಲ್ಲಿ ಸಜೀವ ಬೇಲಿಯ ಬಹುವಿಧ ಬೆಳೆಗಳನ್ನು ಬೆಳೆಸಿದ್ದಾರೆ. ಈ ಬೇಲಿ ಬೆಳೆಗಳಿಗೆ ನೆರಳು ನೀಡಿ ರಕ್ಷಿಸುವುದಲ್ಲದೇ ಅವಶ್ಯಕ ವಸ್ತುಗಳಾದ ಬಿದಿರು, ಅಂಟುವಾಳ, ಸೀಗೆ, ಉರುವಲಿಗಾಗಿ ಹಾಗೂ ಕೃಷಿ ಉಪಕರಣಗಳಿಗೆ ಕಟ್ಟಿಗೆಯನ್ನೂ ಒದಗಿಸುತ್ತವೆ.

ನೀರು ಮತ್ತು ಮಣ್ಣಿನ ಸಂರಕ್ಷಣೆಗಾಗಿ ಜಮೀನನ್ನು ಐದು ತಾಕುಗಳಲ್ಲಿ ವಿಂಗಡಿಸಿದ್ದು ಇಳಿಜಾರಿಗೆ ತಡೆ ಹಾಕಿ ಬದುಗಳನ್ನು ನಿರ್ಮಿಸಿ ಬದುವಿನ ಮೇಲೆ ಬೇಕಾದ ಹುಲ್ಲಿನ ಬೆಳೆ ಹಾಗೂ ಹಸಿರೆಲೆ ಗೊಬ್ಬರದ ಗಿಡಗಳನ್ನು ಬೆಳೆಯಲಾಗಿದೆ. ಇದರಿಂದ ಮೇವು ಗೊಬ್ಬರದ ಜೊತೆಗೆ ಮಣ್ಣು ಮತ್ತು ನೀರು ಕೂಡ ಸುರಕ್ಷಿತ.

ಈ ಮಾದರಿಯಲ್ಲಿ ರೈತನ ವಾಸಕ್ಕಾಗಿ ಸಣ್ಣ ಮನೆಯನ್ನು ನಿರ್ಮಿಸಿ ಕೊಡಲಾಗಿದೆ. ಜೊತೆಗೆ ಹಸು, ಎಮ್ಮೆ ಹಾಗೂ ಕೋಳಿಗಳಿಗೂ ಜಾಗ ಮಾಡಿಕೊಡಲಾಗಿದೆ. ಈ ಪಶುಸಾಕಾಣಿಕೆ ಮತ್ತು ಶೌಚಾಲಯದ ತ್ಯಾಜ್ಯದಿಂದ ಜೈವಿಕ ಅನಿಲ ಘಟಕವನ್ನು ನಿರ್ಮಿಸಿ ತನ್ನ ವಾಸಸ್ಥಳ ಮತ್ತು ದನದ ಕೊಟ್ಟಿಗೆಯಲ್ಲಿ ವಿದ್ಯುತ್ ದೀಪವನ್ನು ಬೆಳಗಿಸಬಹುದಾಗಿದೆ. ಮನೆಯ ಹೊರಗಡೆ ರಾತ್ರಿಯಿಡಿ ದೀಪವೊಂದನ್ನು ಬೆಳಗಿಸಿ ಕೀಟಗಳನ್ನು ಆಕರ್ಷಿಸಿ ಕೆಳಗೆ ನೀರು ತುಂಬಿಸಿದ ತೊಟ್ಟಿಯಲ್ಲಿ ಬೀಳುವಂತೆ ಮಾಡಿ, ಕೀಟನಿಯಂತ್ರಣಕ್ಕೆ ಸೂಕ್ತವ್ಯವಸ್ಥೆ ಕೂಡ ಕಲ್ಪಿಸಲಾಗಿದೆ.

ಮುಂದುವರಿದು, ಗೊಬ್ಬರ ಉತ್ಪಾದನಾ ತೊಟ್ಟಿಗಳನ್ನು ನಿರ್ಮಿಸಿ ಕಾಂಪೋಸ್ಟ್ ಮತ್ತು ಎರೆಹುಳು ಗೊಬ್ಬರವನ್ನು ತಯಾರಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಜಮೀನಿನಲ್ಲಿನ ಎಲ್ಲ ತ್ಯಾಜ್ಯಗಳನ್ನು ಇದರಲ್ಲಿ ಉಪಯೋಗಿಸಿ ಈ ಗೊಬ್ಬರ ಗುಂಡಿಗೆ ನೆರಳು ಒದಗಿಸಲು ಹಾಕಿದ ಚಪ್ಪರದಲ್ಲಿ ತರಕಾರಿ ಬಳ್ಳಿ ಹಬ್ಬಿಸಿ ಸೌತೆ, ಹೀರೆ, ಕುಂಬಳ, ಬಸಳೆ, ಇತ್ಯಾದಿ ಬೆಳೆಸಬಹುದಾಗಿದೆ. ಈವರೆಗಿನ ವಿವರಣೆ ಒಂದಾದರೆ 5 ತಾಕುಗಳಲ್ಲಿ ಪ್ರಾತ್ಯಕ್ಷಿಕವಾಗಿ ಬೆಳೆದ ಬೆಳೆಗಳ ವಿವರದ ಚಿತ್ರಣ ಈ ಕೆಳಗೆ ನೀಡಲಾಗಿದೆ.



ಮೊದಲಿನ ತಾಕಿನಲ್ಲಿ ಹಣ್ಣಿನ ಬೆಳೆಗಳು ಮತ್ತು ಅಂತರ ಬೆಳೆಗಳನ್ನು ಬೆಳೆಯಲಾಗಿದೆ. ಹಣ್ಣಿನ ಬೆಳೆಗಳಾದ ಮಾವು, ಹಲಸು, ನೆಲ್ಲಿ, ಹುಣಸೆ, ಹೊಂಗೆ, ಗೇರು, ನೇರಳೆ ಬೆಳೆದಿದ್ದು ಇವುಗಳ ಸಾಲಿನ ನಡುವೆ ದ್ವಿದಳ ಧಾನ್ಯಗಳಾದ ಬಟಾಣಿ, ಹೆಸರು, ಉದ್ದು, ಸೋಯಾ, ಅವರೆ ಇತ್ಯಾದಿಗಳನ್ನು ಬೆಳೆಸಲಾಗಿದೆ. ಎರಡನೇ ತಾಕಿನಲ್ಲಿ ಎಣ್ಣೆಕಾಳು ಹಾಗೂ ಬೇಳೆಕಾಳು ಬೆಳೆದಿದ್ದಾರೆ. ಮೂರನೇ ತಾಕಿನಲ್ಲಿ ಏಕದಳ ಧಾನ್ಯ ರಾಗಿ ಹಾಗೂ ಹುಚ್ಚೆಳ್ಳನ್ನು ಮಿಶ್ರ ಬೆಳೆಯಾಗಿ ಬೆಳೆಯಲಾಗಿದೆ. ನಾಟಿ ಪದ್ಧತಿಯಲ್ಲಿ ರಾಗಿಯನ್ನು ಬೆಳೆಯುವುದರೊಂದಿಗೆ, ಬಿತ್ತನೆ ಸಮಯದಲ್ಲಿ ಸಾಸಿವೆಯನ್ನು ತೆಳುವಾಗಿ ಬಿತ್ತಿ ಬೆಳೆಸಲಾಗಿದೆ.

ನಾಲ್ಕನೇ ತಾಕಿನಲ್ಲಿ ರಾಗಿ ಮತ್ತು ಅವರೆಯ ಮಿಶ್ರ ಬೆಳೆಯ ಜೊತೆಗೆ ಸಾಸಿವೆ ಕೂಡ ಬೆಳೆದಿದ್ದಾರೆ. ಹೀಗೆ ಬೆಳೆದ ಅವರೆ ಯನ್ನು ಹಸಿ ತರಕಾರಿಯಾಗಿಯೂ ಹಾಗೂ ಒಣಗಿದ ಅವರೆಯನ್ನು ದ್ವಿದಳ ಧಾನ್ಯವಾಗಿಯೂ ಪಡೆಯಲಾಗಿದೆ. ಐದನೇ ತಾಕಿನಲ್ಲಿ ರೈತನ ವಾಸಕ್ಕೊಂದು ಸಣ್ಣ ಮನೆ, ಹಸುವಿನ ಕೊಟ್ಟಿಗೆ, ಶೌಚಾಲಯ, ಜೈವಿಕ ಅನಿಲ ಘಟಕ ಹಾಗೂ ಗೊಬ್ಬರದ ತೊಟ್ಟಿಗಳಿವೆ. ಜೊತೆಗೆ ಕೃಷಿ ಹೊಂಡವೂ ಇದೇ ತಾಕಿನಲ್ಲಿದೆ.

ಉರುವಲನ್ನು ಸುಡುವ ಪ್ರಶ್ನೆ ಏಳುವುದಿಲ್ಲ. ಜಮೀನಿನ ಎಲ್ಲ ತ್ಯಾಜ್ಯ ಜೈವಿಕ ಅನಿಲ ಘಟಕಕ್ಕೂ ಹಾಗೂ ಗೊಬ್ಬರದ ತಯಾರಿಗೆ ಬಳಸಲಾಗುತ್ತಿದೆ. ಜಾನುವಾರುಗಳ ಸಾಕಣೆಯಿಂದ ಹಾಲು, ಮಾಂಸವೂ ಸಿಗುತ್ತದೆ. ಜೊತೆಗೆ ಇವುಗಳ ಮಾರಾಟದಿಂದ ಉತ್ತಮ ಆದಾಯವೂ ಸಿಗುತ್ತಿದೆ. ಇಲ್ಲಿಯ ಕೃಷಿ ಹೊಂಡ 3 ಮೀಟರ್ ಆಳವಾಗಿದ್ದು ಇದರಲ್ಲಿ ಮೀನು ಸಾಕಣೆ ಮಾಡುತ್ತಿದ್ದಾರೆ. ಹೊಂಡದ ಸುತ್ತಲಿನ ಬಿದಿರಿನ ಬೇಲಿಗೆ ತರಕಾರಿ ಬಳ್ಳಿ ಹಬ್ಬಿಸಿ ಹೀರೆ, ಹಾಗಲ, ಪಡುವಲ, ಅಲಸಂದೆ ಬೆಳೆದಿದ್ದಾರೆ. ವಾಸ್ತವ್ಯಕ್ಕೆ ಹತ್ತಿರದಲ್ಲಿ ಕೈತೋಟವಿದ್ದು ಇಲ್ಲಿ ತರಕಾರಿ ಬೆಳೆಗಳಾದ ಟೊಮೆಟೊ, ಬೆಂಡೆ, ಮೂಲಂಗಿ, ಗಜ್ಜರಿ, ಬದನೆ, ಮೆಣಸಿನಕಾಯಿ ಬೆಳೆದಿದ್ದಾರೆ. ಈ ರೀತಿ ವಿವಿಧ ಬಗೆಯ ತರಕಾರಿಗಳು ವರ್ಷಪೂರ್ತಿ ಲಭ್ಯವಾಗುವಂತೆ ಮಾಡಿಕೊಡಲಾಗಿದೆ. ಜೊತೆಗೆ ವಾಸ್ತವ್ಯದ ಆಚೆ–ಈಚೆ ಬೇಕಾದ ಹೂವಿನ ಮರ, ವೀಳ್ಯದೆಲೆ ಬಳ್ಳಿ, ನಿಂಬೆ, ಮೆಣಸು, ಔಷಧೀಯ ಗಿಡಗಳನ್ನು ಬೆಳೆಸಲಾಗಿದೆ. ಈ ಮಾದರಿ ಸಮಗ್ರ ಕೃಷಿಗೆ ಖರ್ಚು ಕಡಿಮೆ ಲಾಭವೂ ಹೆಚ್ಚು. ಖರ್ಚು ಮತ್ತು ಆದಾಯದ ವಿವರ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

ಇಷ್ಟೆಲ್ಲವೂ ಒಂದೆಕರೆಯಿಂದ ಸಾಧ್ಯವೆಂದಾದಮೇಲೆ, ಹೊರಗಿನ ಅವಲಂಬನೆ ಎಲ್ಲಿದೆ? ಕೇವಲ ಉಪ್ಪು–ಸಕ್ಕರೆಗಾಗಿ ಅಲ್ಲವೇ? ಸಾಲ–ಸೋಲ ಮಾಡುವ ಅವಶ್ಯಕತೆಯಾದರೂ ಏನಿದೆ? ಮನಸಿಟ್ಟು ಮೈಮುರಿದು ದುಡಿದರೆ ಒಂದೆಕರೆ ಜಮೀನಿನಲ್ಲಿ ಸುಸ್ಥಿರ ಕೃಷಿ, ಆಹಾರ ಭದ್ರತೆ, ಸ್ವಾವಲಂಬನೆ ಜೀವನ ನೀಡುವುದೆಂಬುವುದರಲ್ಲಿ ಯಾವ ಸಂಶಯವೂ ಇಲ್ಲ. ಡಾ. ರುದ್ರಾರಾಧ್ಯರು ಹೆಚ್ಚು ಜನರಿಗೆ ಈ ಮಾದರಿಯ ಅಳವಡಿಕೆಗಾಗಿ 'ಸಣ್ಣ ರೈತರಿಗೆ ಸಮಗ್ರ ಕೃಷಿ ಮಾದರಿ' ಎಂಬ ಕಿರುಪುಸ್ತಕವನ್ನು ಹೊರತಂದಿದ್ದಾರೆ.

ಒಂದು ಎಕರೆಯಲ್ಲಿ ಬೆಳೆಯಲು ತಗಲುವ ಒಟ್ಟು ಖರ್ಚು


ಕ್ರ. ಸಂ.	ಖರ್ಚಿನ ವಿವರ	ಮೊಬಲಗು (ರೂ)
1.	ಬಿತ್ತನೆ ಬೀಜ / ಕಸಿ / ಸಸಿ	1,450
2.	ಗೊಬ್ಬರಗಳು	1,450
3.	ಕಾರ್ಮಿಕ ಕೆಲಸ	500
4.	ಇತರೆ	100
	ಒಟ್ಟು ರೂ.	3500

ಮೊದಲ ವರ್ಷ ಹಿಡುವಳಿಯಿಂದ ನಿರೀಕ್ಷಿಸಬಹುದಾದ ಆದಾಯ:

ಕ್ರ.ಸಂ.	ಎಲ್ಲಿಂದ (ಯಾವ ಬಾಬಿನಿಂದ) ಎಷ್ಟು	ಮೊಬಲಗು (ರೂ)
1.	ತಾಕು–1ರ ಅಂತರ ಬೆಳೆಗಳು (ಕಾಳುಗಳು/ತರಕಾರಿ)	2,000
2.	ತಾಕು–2: ಅ) ನೆಲಗಡಲೆ (3 ಕ್ವಿಂಟಾಲು)	4,500
	ಅ) ತೊಗರಿ (120 ಕೆ.ಜಿ.)	3,000
3.	ತಾಕು–3: ಅ) ರಾಗಿ + ಸಾಸಿವೆ	1,000
	ಅ) ಹುಚ್ಚೆಳ್ಳು	750
4.	ತಾಕು–4: ಅ) ರಾಗಿ + ಸಾಸಿವೆ	1,000
	ಅ) ಅವರೆ	1,250
5.	ತಾಕು–5: ಅ) ತರಕಾರಿಗಳು/ಹಣ್ಣುಗಳು/ಬೀಜ ಇತ್ಯಾದಿ	3,000
6.	ಹಾಲಿನ ಮಾರಾಟ: 200 ದಿನ, 3 ಲೀಟರ್್ಡ7 ರೂ	4,200
7.	ಕೋಳಿಮೊಟ್ಟೆ, ಮುದಿ ಕೋಳಿಗಳು ಇತ್ಯಾದಿ	2,000
8.	ಮೀನಿನ ಮಾರಾಟ: 30 ಕೆ.ಜಿ.್ಡ30 ರೂ	900
9.	ಸಾವಯವ ಗೊಬ್ಬರ (ಮೌಲ್ಯ)	1,500
	ಒಟ್ಟು ರೂ.	25,100

ವಿವರಗಳಿಗೆ:
ಡಾ. ಎಂ. ರುದ್ರಾರಾಧ್ಯ, ಹಿರಿಯ ವಿಜ್ಞಾನಿ,
ಕೃಷಿ ಸಂಶೋಧನಾ ಕೇಂದ್ರ, ಬಾವಿಕೆರೆ – 577144, ತರಿಕೆರೆ (ತಾ),
ಚಿಕ್ಕಮಗಳೂರು (ಜಿ), ಸಂಪರ್ಕಿಸಬಹುದು, ಫೋನ್:08261–255122

ಕಲ್ಲಿನ ಕೊಳಲು



ಕೊಳಲು ಎಂದಾಕ್ಷಣ ಬಿದಿರಿನಿಂದ ಮಾಡಿದ್ದು ಎಂದು ತಿಳಿಯಬಹುದೇ ವಿನಃ ಕಲ್ಲಿನಿಂದಲೂ ಸಾಧ್ಯ ಎಂಬ ಆಲೋಚನೆ ಯಾರಿಗೂ ಬರಲಿಕ್ಕಿಲ್ಲ. ವಿಶ್ವ ಪ್ರಸಿದ್ಧ ಹಂಪೆಯ 'ಸರಿಗಮ ಸಂಗೀತ ಕಂಬ'ಗಳಿಂದ ಸ್ಫೂರ್ತಿಪಡೆದ ಕೊಪ್ಪಳದ ಪ್ರಕಾಶ ಕುಮಾರ್ ಕಲ್ಲಿನಿಂದ ಕೊಳಲನ್ನು ತಯಾರಿಸಿದ್ದಾರೆ. ಸ್ವತಃ ನುಡಿಸಿದ್ದಾರೆ ಕೂಡ. ಈ ಒಂದು ಪ್ರಯೋಗ 'ಶಿಲೆಗಳ ಸಂಗೀತ' ದಲ್ಲಿ ಅನೇಕರು ಹೊಸ ಪ್ರಯೋಗ ಮಾಡಲು ಹಾಗೂ ಇನ್ನೂ ಹೆಚ್ಚಿನ ಕೌಶಲ್ಯಗಳು ಈ ಕ್ಷೇತ್ರದಲ್ಲಿ ಮಾಡಲು ಪ್ರೇರೇಪಿಸಿಯಾವು.

ವಿ.ಸೂ. ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ರಾಷ್ಟ್ರೀಯ ಸ್ಪರ್ಧೆಗೆ ಕಳುಹಿಸಿಕೊಡಲಾಗಿದೆ.

ನಮ್ಮ ಕಾಮಧೇನು

ಕೃಷಿ ಪ್ರಯೋಗ ಪರಿವಾರ 'ಕೃಷಿ ನಿವಾಸ'ಕುರುವಳ್ಳಿ ಅಂಚೆ-577432, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ, ಬೆಲೆ ರೂ.25, ಪು.32

ಕೃಷಿ ಪ್ರಯೋಗ ಪರಿವಾರ ಮತ್ತು 'ಸಂಜೀವನ ಕೃಷಿ ಸಂಶೋಧನಾ ಪ್ರತಿಷ್ಠಾನ' ಹೊರತಂದಿರುವ ಈ ಕಿರುಪುಸ್ತಕ ಗೋವನ್ನು ಕೇಂದ್ರವಾಗಿಟ್ಟುಕೊಂಡು ಸ್ವದೇಶಿ, ಸ್ವಾವಲಂಬಿ, ಸಾವಯವ ಕೃಷಿಯನ್ನು ಪ್ರತಿಪಾದಿಸುತ್ತದೆ. ಈ ಪುಸ್ತಕವು ಭಾರತದ (ವಿಶೇಷವಾಗಿ ದಕ್ಷಿಣ ಭಾರತದ) ದೇಶೀಯ ಜಾನುವಾರು ತಳಿಗಳನ್ನು ಸವಿವರ ಹಾಗೂ ಸಚಿತ್ರ ಸಮೇತವಾಗಿ ಪರಿಚಯಿಸಿದೆ. ದೇಶೀಯ ತಳಿಗಳ ಸಂರಕ್ಷಣಾ ಹಾಗೂ ಸಂವರ್ಧನಾ ಕೇಂದ್ರಗಳನ್ನು ಈ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ದೇಶೀ ಜಾನುವಾರುಗಳ ಮಹತ್ವ ಮತ್ತು ಸಂರಕ್ಷಣೆಯ ಕಳಕಳಿ ಹೊಂದಿರುವ ಗ್ರಾಮೀಣ ಜನತೆಯ ಜಾಗೃತಿಗೆ ಉತ್ತಮವಾಗಿ ಮೂಡಿ ಬಂದ ಕಿರು ಪುಸ್ತಕ ಇದಾಗಿದೆ.

ಜಾನುವಾರುಗಳಿಗೆ ದೇಶೀ ವೈದ್ಯ ಪದ್ಧತಿ - ಕೈಪಿಡಿ
(Indigenous Veternary Practices - A Reference Book)

ಹನಿಬೀ ಬಳಗದ ತಮಿಳುನಾಡಿನ ಮಧುರೈ ಮೂಲದ "ಸೇವಾ" (Sustainable Agriculture & Environmental Voluntary Action (SEVA) ಸಂಸ್ಥೆಯು ಕಳೆದ 12 ವರ್ಷಗಳಿಂದ ಕೃಷಿ, ಪಶುಸಂಗೋಪನೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದು ಜಾನುವಾರುಗಳಿಗೆ ದೇಶೀ ವೈದ್ಯ ಪದ್ಧತಿ'(Indigenous Veterinary Medicine - A Reference Book) ಈ ಕೈಪಿಡಿಯನ್ನು ಹೊರತಂದಿದ್ದಾರೆ.

ಪಶುಗಳಲ್ಲಿ ಕಂಡು ಬರುವ ಸಾಮಾನ್ಯ ರೋಗ ಮತ್ತು ಬಾಧೆಗಳಾದ ಹೊಟ್ಟೆಯೂದುವಿಕೆ, ಅತಿಸಾರ, ರಕ್ತಭೇದಿ, ಕೆಮ್ಮು, ಗರ್ಭಾಶಯ ತೊಂದರೆಗಳು, ಕಾಲು ಮತ್ತು ಬಾಯಿ ರೋಗ, ಗಾಯ, ಚರ್ಮ ಕಾಯಿಲೆ, ಕೋಡುಗಳಲ್ಲಿ ನವೆ ಮುಂತಾದವುಗಳಿಗೆ ವಿವರವಾದ ದೇಶೀ ಔಷಧೋಪಚಾರವನ್ನು ತಿಳಿಸಿದ್ದಾರೆ.

ಪ್ರಮುಖ ಸಸ್ಯಗಳ ವೈಜ್ಞಾನಿಕ ಮತ್ತು ಸಾಮಾನ್ಯ ಹೆಸರು, ಬಳಕೆಯ ಪ್ರಮಾಣ ಮತ್ತು ತಯಾರಿಕಾ ವಿಧಾನವನ್ನು ಕೊಡಲಾಗಿದೆ. ಸಚಿತ್ರವಾಗಿ, ರೋಗ/ಬಾಧೆಯ ಲಕ್ಷಣಗಳು ಓದುಗರಿಗೆ ಅರ್ಥವಾಗುವಂತೆ ಈ ಪುಸ್ತಕ ಮೂಡಿ ಬಂದಿದೆ. ಭಾರತೀಯ ಪ್ರಬಂಧನ ಸಂಸ್ಥೆ ಅಹಮದಾಬಾದ್‌ನ ಪ್ರಾಧ್ಯಾಪಕರು ಮತ್ತು ಹನಿಬೀ ಹಾಗೂ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮುಖ್ಯಸ್ಥರು ಆಗಿರುವ ಪ್ರೊ. ಅನಿಲ್ ಗುಪ್ತಾ ಮುನ್ನುಡಿ ಬರೆದಿದ್ದು, ತಮಿಳುನಾಡಿನ ಪಶುವೈದ್ಯ ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಎಸ್ ಬಾಲರಾಮನ್ ಈ ಪುಸ್ತಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಕಾಶಕರು: ***Sustainable Agriculture and Environmental Voluntary Action (SEVA), 45, T.P.M. Nagar, Virattipathu, Madhurai-625010 (Tamil Nadu),*** *ಬೆಲೆ: ರೂ.50/-, ಪುಟ.64*

ಸಾಂಪ್ರದಾಯಿಕ ಚೂರ್ಣ 'ದಂತಧಾವನ'

ಪೇಸ್ಟನ್ನು ತ್ಯಜಿಸಿ ಪರ್ಯಾಯವಾಗಿ ತಾವೇ ಕಂಡುಹಿಡಿದ ದಂತ ಚೂರ್ಣವನ್ನು ಉಪಯೋಗಿಸಿ ಕೃತಕ ಹಲ್ಲುಗಳ ಬಳಕೆಯನ್ನು ತಪ್ಪಿಸಿಕೊಂಡ ವಿಚಾರ ಆಶ್ಚರ್ಯ ಹುಟ್ಟಿಸುತ್ತದೆ ನಿಜ.

ಈ 'ದಂತಚೂರ್ಣ'ದ ಸಂಶೋಧಕ ಕಾಸರಗೋಡು ತಾಲ್ಲೂಕಿನ ಕುಂಬ್ಡಾಜೆ ಗ್ರಾಮದ 51ರ ಹರೆಯದ ದಿಡ್ಪೆ ಮಹಾಲಿಂಗೇಶ್ವರ ಭಟ್. ಹಲ್ಲುಸೆಳೆತ, ನೋವು ಸಹಿಸಲಾಗದೆ ದಂತ ವೈದ್ಯರಿಂದ ತಪಾಸಣೆಗೊಳಗಾದ ಭಟ್ಟರು, ತನ್ನ 43ರ ಹರೆಯದಲ್ಲೇ ಹಲ್ಲುಗಳನ್ನು ಕಿತ್ತು ಕೃತಕ ಹಲ್ಲುಗಳ ಜೋಡಣೆಯ ಸಲಹೆ ಪಡೆದರು. ಕೆಲವು ಹಲ್ಲುಗಳನ್ನು ಕಿತ್ತದ್ದೂ ಆಯಿತು. ಆ ಯಾತನೆ ಬೇಡವೆನಿಸಿತು. ಹಿರಿಯರಲ್ಲಿ ಹಳೆ ಔಷಧಿಗಳ ಬಗ್ಗೆ ವಿಚಾರಿಸಿದರು. ತೆಂಗಿನ ಗೆರಟೆಯ ಮಸಿ, ಉಪ್ಪು, ಕಾಳುಮೆಣಸು, ಕಹಿಬೇವಿನ ಎಲೆ ಅಥವಾ ತೊಗಟೆಗಳನ್ನು ಸೇರಿಸಿ ನಯವಾಗಿ ಪುಡಿಮಾಡಿ ಹಲ್ಲುಜ್ಜಿದರು. ಒಂದು ವಾರದಲ್ಲೇ ಹಲ್ಲುನೋವು ಮಾಯ. ಅಲ್ಲಾಡುವ ಹಲ್ಲುಗಳು ಗಟ್ಟಿಯಾದವು. ಇದಕ್ಕೆ 'ದಂತಧಾವನ' ಎಂದು ನಾಮಕರಣ ಮಾಡಿದರು.

ಒಂದು ಗ್ರಾಂ ಚೂರ್ಣ 3 ಬಾರಿ ಹಲ್ಲುಜ್ಜಲು ಸಾಕಾಗುತ್ತದೆ. ಅವರವರ ಅಭ್ಯಾಸದಂತೆ ಬ್ರಶ್, ಬೆರಳು ಅಥವ ಕುಂಚಗಳನ್ನು ಬಳಸಬಹುದು. ಔಷಧೀಯ ಗುಣಗಳಿಂದ ಕೂಡಿರುವ ದಂತಧಾವನ ಚೂರ್ಣವು ಎಲ್ಲ ವಯೋಮಾನದವರಿಗೂ ಹೊಂದಾಣಿಕೆಯಾಗಬಲ್ಲದು. ಹಲ್ಲಿನ ಅಸಲಿ ಬಣ್ಣವನ್ನು ಕಾಪಾಡಿಕೊಳ್ಳಬಹುದು. ಗಾಳಿ ತಗಲದೇ ಇದ್ದರೆ, ಚೂರ್ಣವು 12 ವರ್ಷ ಇಟ್ಟರೂ ಹಾಳಾಗುವುದಿಲ್ಲ ಎಂಬುದು ಅವರ ಅಭಿಪ್ರಾಯ.

ಮಲಬದ್ಧತೆ ನಿವಾರಣೆಗೆ ಆಯುರ್ವೇದಿಕ್ ಮಾತ್ರೆ

ಆಹಾರ ಮತ್ತು ವಾತಾವರಣದ ವಿಷಾಂಶಗಳಿಂದಾಗಿ 100ಕ್ಕೆ 70ರಷ್ಟು ಜನರು ಮಲಬದ್ಧತೆಯಿಂದ ನರಳುತ್ತಿರುವುದು ಕಂಡು ಬಂದಿದ್ದು ಇದನ್ನು ಸುಲಭದಲ್ಲಿ ನಿವಾರಿಸಲು ಬಾಳುಕುಳಿ ಗ್ರಾಮ, ಸಿದ್ದಾಪುರ (ತಾ), ಉತ್ತರ ಕನ್ನಡ ಜಿಲ್ಲೆಯವರಾದ ರಾಮಚಂದ್ರ ಗಣಪತಿ ಹೆಗಡೆಯವರು ಹೂವಿನಿಂದ ಆಯುರ್ವೇದಿಕ್ ಮಾತ್ರೆಯನ್ನು ತಯಾರಿಸಿ ಬಳಸುತ್ತಿದ್ದಾರೆ.

ಬಿಳಿ ಗುಲಾಬಿಯ ಒಣಗಿದ ಪುಡಿ 80%, ಓಮದ ಕಾಳು *(Carum copticum)*, ಜೀರಿಗೆ, ಕರಿ ಮೆಣಸು, ಶುಂಠಿ ಪ್ರತಿಯೊಂದೂ 5%, ಇವುಗಳನ್ನು ನುಣ್ಣಗೆ ಪುಡಿ ಮಾಡಿ ಸಕ್ಕರೆ ಪಾಕ ಅಥವಾ ಗ್ಲೂಕೋಸ್ ಗಮ್‌ನಲ್ಲಿ ಮಿಶ್ರಣ ಮಾಡಬೇಕು. ಮಲಬದ್ಧತೆಯಿರುವವರು ಆಹಾರ ಸೇವಿಸುವುದಕ್ಕಿಂತ ಒಂದು ತಾಸು ಮುಂಚೆ ಈ ಮಾತ್ರೆಯನ್ನು ಸೇವಿಸಿ ನೀರು ಕುಡಿಯಬೇಕು. ಪ್ರಸ್ತುತ ಸಾಕಷ್ಟು ಜನರು ಇದನ್ನು ಬಳಸುತ್ತಿದ್ದಾರೆ.

ಈ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ 4ನೇ ಸುತ್ತಿನ ಸ್ಪರ್ಧೆಗೆ ಕಳುಹಿಸಿಕೊಡಲಾಗಿದೆ.

ಭಾರತದಲ್ಲಿ ಸಾವಯವ ಕೃಷಿ ಯೋಜನೆಗಳು

FAO ಸಂಸ್ಥೆ ಭಾರತದಲ್ಲಿ, ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡುವುದು ಮತ್ತು ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಬೃಹತ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಆಹಾರ ಸುಭದ್ರತೆ, ಬಡತನ ನಿರ್ಮೂಲನೆ ಮತ್ತು ಜೀವನೋಪಾಯ ಒದಗಿಸುವ ನಿಟ್ಟಿನಲ್ಲಿ ಒರಿಸ್ಸಾ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಆಯಾ ರಾಜ್ಯ ಸರ್ಕಾರಗಳ ಜೊತೆ FAO ಕೆಲಸ ಮಾಡುತ್ತಿದೆ. FAO ಸಂಸ್ಥೆಯು 1.4 ಮಿಲಿಯನ್ ಡಾಲರ್‌ಗಳ ವೆಚ್ಚದಲ್ಲಿ ಜನವರಿ 2005 ರಿಂದ ಮುಂದಿನ ಮೂರು ವರ್ಷಗಳ ಕಾಲ ಭಾರತದ ವಿವಿಧ ಭಾಗಗಳಲ್ಲಿ ಸಾವಯವ ಪದ್ಧತಿಯಲ್ಲಿ ಔಷಧೀಯ ಸಸ್ಯಗಳನ್ನು ಮಹಾರಾಷ್ಟ್ರದ ನಾಸಿಕ್ ಅಥವಾ ಅಕೋಲ ಭಾಗಗಳಲ್ಲಿ ಬೆಳೆಸಲು BAIF ಸಂಸ್ಥೆಯ ಜೊತೆ ಆಯೋಜಿಸಲಾಗಿದೆ ಎಂದು ಭಾರತ ಮತ್ತು ನೇಪಾಳದ ಕಾರ್ಯಕ್ರಮಗಳ FAO ಪ್ರತಿನಿಧಿ ಶ್ರೀ ಗುಸ್ತಾಫ‌ನ್‌ರೆ ಹೇಳಿದ್ದಾರೆ.

ದೇಶೀಯ ಮತ್ತು ಅಂತರರಾಷ್ಟ್ರೀಯ ರಫ್ತು ಮಾರುಕಟ್ಟೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಔಷಧೀಯ ಸಸ್ಯಗಳಿಗೆ ಹೆಚ್ಚು ಬೆಲೆ ಮತ್ತು ಬೇಡಿಕೆ ಇರುವುದರಿಂದ ಗುಣಮಟ್ಟ ಹೆಚ್ಚಿಸುವಲ್ಲಿ ಅವಶ್ಯವಾದ ತರಬೇತಿ, ಕಾರ್ಯಕ್ರಮಗಳನ್ನು ಸಣ್ಣ ರೈತರಿಗೆ ನೀಡಲು ಯೋಜಿಸಲಾಗಿದೆ.

ಈ ಯೋಜನೆಯಡಿ ಸಣ್ಣ ರೈತರು ಸಂಘಟಿತರಾಗಿ ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಸಾಂಘಿಕ ರೂಪದಲ್ಲಿ ಮುಂದಾಗಿ ಬಂದಲ್ಲಿ ಹೆಚ್ಚು ಲಾಭಗಳಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಹತ್ತಿಯ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಕಾರ್ಯಕ್ರಮವನ್ನು ಅಳವಡಿಸಲು ಸಂಸ್ಥೆ ಮುಂದಾಗಿದ್ದು ರಾಸಾಯನಿಕಗಳ ಬಳಕೆ ಮತ್ತು ಖರ್ಚನ್ನು ಕಡಿಮೆ ಮಾಡಲು ಆಲೋಚಿಸಿದೆ. *ಮೂಲ: **Farmer's Forum, Dec-2004, p.24***

ಭಾರತದ 17ನೇ ಪಶುಗಣತಿ – ಕೆಲ ಮುಖ್ಯಾಂಶಗಳು

ದೇಶದಲ್ಲಿ ಒಟ್ಟು 1.6 ಕೋಟಿ ಪಶುಗಳಿದ್ದು, 1.54 ಕೋಟಿ ಗ್ರಾಮೀಣ ಪ್ರದೇಶದಲ್ಲಿ, ಉಳಿದವುಗಳು ನಗರ ಪ್ರದೇಶಗಳಲ್ಲಿವೆ. ಭಾರತ ಈಗಾಗಲೇ 2004ರಲ್ಲಿ 92.23 ಮಿಲಿಯನ್ ಟನ್ ಗರಿಷ್ಠ ಹಾಲು ಉತ್ಪಾದನೆಯೊಂದಿಗೆ ವಿಶ್ವದಲ್ಲಿ ಪ್ರಥಮ ಸ್ಥಾನದಲ್ಲಿದೆ. ಈ ದಾಖಲೆ 2005ರಲ್ಲಿ 93.96 ಮಿಲಿಯನ್ ಟನ್ ಗುರಿ ತಲುಪುವ ನಿರೀಕ್ಷೆ ಇದೆ.

ಹಾಲು ಕರೆಯುವ ಎಮ್ಮೆಗಳ ಸಂಖ್ಯೆ ಪ್ರತಿ ಶತ 10.5% ರಷ್ಟು ಹೆಚ್ಚಾಗಿದ್ದು, ಹಾಲುಕರೆಯುವ ದೇಶೀ ಆಕಳುಗಳ ಸಂಖ್ಯೆ ಪ್ರತಿಶತ 6.1ರಷ್ಟು ಕಡಿಮೆಯಾಗಿದೆ. ಸರ್ಕಾರ ವಿದೇಶಿ ಸಂಕರಣ ಪಶು ತಳಿಗಳಿಗೆ ನೀಡುವ ಪ್ರೋತ್ಸಾಹವು ದೇಶೀ ಆಕಳುಗಳಿಗೆ ಸಿಕ್ಕದಿರುವುದೇ ಪ್ರಮುಖ ಕಾರಣವಾಗಿದೆ. ಸದ್ಯ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಕರಡು ಪಶು ನೀತಿಯಲ್ಲಿ ದೇಶೀ ಆಕಳುಗಳ ಬಗ್ಗೆ ಆಲೋಚಿಸಿದ್ದಾಗಿದ್ದರೂ ಈಗ ಚಾಲ್ತಿಯಲ್ಲಿರುವ ಪಶು ವಿಮೆಯಲ್ಲಿ ದೇಶೀ ಆಕಳುಗಳ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದೆ. ಆದರೆ ವಿದೇಶಿ ಸಂಕರಣ ತಳಿ ಹಾಗೂ ಒಂದು ವರ್ಷದೊಳಗಿನ ಎಮ್ಮೆಗಳಿಗೆ ಪಶು ವಿಮೆ ಲಭ್ಯವಾಗುತ್ತಿದೆ. ಇಂದು ಅವಶ್ಯಕವಾಗಿ ದೇಶೀಯ ತಳಿಗಳ ಸಂರಕ್ಷಣೆಗಾಗಿ ಗಮನ ನೀಡಬೇಕಾಗಿದೆ. ಇವುಗಳ ಸಂರಕ್ಷಣೆಯಿಂದ ಗ್ರಾಮೀಣ ಪ್ರದೇಶದ ಬಡ ಜನರಿಗೆ ಪೌಷ್ಠಿಕಾಂಶಗಳ ಸುಭದ್ರತೆಯನ್ನು ಕಡಿಮೆ ಖರ್ಚಿನಲ್ಲಿ ಒದಗಿಸಬಹುದಾಗಿರುತ್ತದೆ. ದೇಶೀ ತಳಿಗಳ ಪಾಲನೆಗೆ ತಗಲುವ ವೆಚ್ಚ, ವಿದೇಶಿ ಸಂಕರ ತಳಿಗಳಿಗಿಂತ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಗ್ರಾಮೀಣ ಪ್ರದೇಶದ ಆರ್ಥಿಕತೆ ಸುಧಾರಿಸಲು ಕಡಿಮೆ ಬಂಡವಾಳದೊಂದಿಗೆ ದೇಶೀ ತಳಿಗಳ ಪಶು ಸಂಪತ್ತು ಅಭಿವೃದ್ಧಿಪಡಿಸಬೇಕಾದ ಅನಿವಾರ್ಯತೆ ಇದೆ.

ರಾಜ್ಯ ಮಟ್ಟದ ಸಾವಯವ ಕೃಷಿ ಸಮಾವೇಶ

ಎರಡು ದಿನದ ವಿಚಾರ ಸಂಕಿರಣ ಮತ್ತು ರಾಜ್ಯ ಮಟ್ಟದ ಸಾವಯವ ಕೃಷಿಕರ ಸಮಾವೇಶವನ್ನು ಕೂಡಲಸಂಗಮದಲ್ಲಿ ದಿನಾಂಕ 2–3 ಮಾರ್ಚ್, 2005 ರಂದು ವಿಶ್ವ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಬಾಗಲಕೋಟೆ ಇವರ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಸಾವಯವ ಕೃಷಿಕರ ಅನೇಕ ಪ್ರಯೋಗಗಳು, ವಿಧಿ ವಿಧಾನಗಳು ಮತ್ತು ಪದ್ಧತಿಗಳ ದಾಖಲಾತಿಯ ಸಂಗ್ರಹಿತ ಹೊತ್ತಿಗೆಯನ್ನೂ ಈ ಸಂದರ್ಭದಲ್ಲಿ ಹೊರತರಲು ಈ ಕಾರ್ಯಕ್ರಮ ಉದ್ದೇಶಿಸಿದೆ. ಈ ಕಾರ್ಯಕ್ರಮದಲ್ಲಿ 'ಅಭಿವರ್ಧಿತ ಸಾವಯವ ಗೊಬ್ಬರ ವೈಜ್ಞಾನಿಕ ಕೃಷಿಗೆ ಅತ್ಯಗತ್ಯ' ಈ ಪುಸ್ತಕದ ಲೇಖಕರಾದ ಶ್ರೀ ಕೆ.ಎಂ. ರಂಗಪ್ಪ (ಕ್ಷೇತ್ರ ಸಹಾಯಕರು, ಜಿ.ಕೆ.ವಿಕೆ.) ನವರು ಅಭಿವರ್ಧಿತ ಸಾವಯವ ಗೊಬ್ಬರ ತಯಾರಿಸುವ ಕ್ರಮಗಳನ್ನು ಕೃಷಿಕರಿಗೆ ತಿಳಿಸಿಕೊಟ್ಟರು.

ಆಸಕ್ತರು ಸಂಪರ್ಕಿಸಬೇಕಾದ ವಿಳಾಸ: ವಿಶ್ವ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ವೆಂಕಟೇಶ್ವರ ನಿಲಯ, 1ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ವಿನಾಯಕ ನಗರ, ಬಾಗಲಕೋಟೆ–587101, ದೂ: 08354–222644

Financial Expressನ ವರದಿಗಾರರಾದ ಶ್ರೀ ಅಶೋಕ ಬಿ. ಶರ್ಮಾ ಈ ಸಾಲಿನ 'Millennium ICRISAT Science Award' 2004ಕ್ಕೆ ಪಾತ್ರರಾಗಿದ್ದಾರೆ. ಶ್ರೀ ಶರ್ಮಾ ಅವರು ಪರಿಸರ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ, ಈ ಪ್ರಶಸ್ತಿ ನೀಡಲಾಗಿದೆ. ದಿನಾಂಕ 15.12.2004 ರಂದು ICRISATನ 32ನೇ ವಾರ್ಷಿಕ ದಿನಾಚರಣೆಯ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಇದೇ ವರ್ಷ ಇವರು 'ಪ್ರೇಮ ಭಾಟಿಯಾ' ಸ್ಮರಣಾರ್ಥ ಪ್ರಶಸ್ತಿಯನ್ನು ಗಳಿಸಿರುವುದು ವಿಶೇಷವಾಗಿದೆ.

Financial Express ನಲ್ಲಿ ಮತ್ತು ದೇಶದ ಇತರ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದ ಕೃಷಿ, ಪರಿಸರ, ಆರ್ಥಿಕ ಅಭಿವೃದ್ಧಿ ಮತ್ತು ಜಾಗತೀಕರಣ ಕುರಿತ ಇವರ ಖಚಿತ ನಿಲುವಿನ ಲೇಖನಗಳು ಅನೇಕ ಜನ ಪರಿಣಿತರಿಂದ ಮೆಚ್ಚುಗೆ ಪಡೆದಿವೆ. ಇವರಿಗೆ ಹಿತ್ತಲಗಿಡದ ಶುಭ ಹಾರೈಕೆಗಳು.

ವಯೋವೃದ್ಧ ''ಜಲಯೋಧರು''

ಲೇಖನ ಚಂದ್ರಶೇಖರ ಪ್ರಸಾದ್ .ಜಿ ಮತ್ತು ಸಿದ್ಧರಾಮೇಗೌಡ



ಇತ್ತೀಚೆಗೆ ಎಲ್ಲೆಲ್ಲೂ ಜಲಕೊಯ್ಲು, ಮಳೆ ಬೇಸಾಯ ಹಾಗೂ ನೀರಿನ ಸುಸ್ಥಿರ ಬಳಕೆಯ ಮಾತು ಕೇಳಿ ಬರುತ್ತಿದೆ. ಸರ್ಕಾರ ಮತ್ತು ಸಂಘ ಸಂಸ್ಥೆಗಳು ಜನರಲ್ಲಿ ಜಲಸಾಕ್ಷರತೆ ಮೂಡಿಸಿ, ಜಲಸಂರಕ್ಷಣೆಗೆ ಆಂದೋಲನದ ರೂಪು ಕೊಡುವುದಕ್ಕಾಗಿ ಕೋಟಿ ಕೋಟಿ ಅಂದಾಜಿನ ಯೋಜನೆಗಳನ್ನು ರೂಪಿಸತೊಡಗಿವೆ. ಆದರೆ ಇದ್ಯಾವುದನ್ನು ಅರಿಯದ ನೀರು ಉಳಿಸುವ, ಬೆಳೆಸುವ, ಸಮರ್ಥವಾಗಿ ಬಳಸುವ ಕಾಯಕದಲ್ಲಿ ತೊಡಗಿದ್ದು, ನಾಡಿಗೆ ಮಾದರಿಯಾಗಬಲ್ಲ ಮೂವರು ಜಲಯೋಧರ ಪರಿಚಯ ಇಲ್ಲಿದೆ.

ಕಮ್ಮಾರ ಬಾಲಪ್ಪ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹಿರೇ ಅರಳಿಹಳ್ಳಿ ಗ್ರಾಮದ ಕಮ್ಮಾರ ಬಾಲಪ್ಪ, ಸುಮಾರು ಇಪ್ಪತ್ತು ವರ್ಷಗಳಿಂದ ಮಾಡಿಕೊಂಡು ಬಂದಿರುವ ಜಲಮರುಪೂರಣ ಕಾರ್ಯದಿಂದಾಗಿ ಇಂದು ತಮಗರಿವಿಲ್ಲದೇ ಜಲಸಂರಕ್ಷಣೆಯಲ್ಲಿ ತೊಡಗಿರುವ ಜಲಯೋಧರಾಗಿದ್ದಾರೆ.

ಅರವತ್ತೈದರ ವಯೋವೃದ್ಧ ಬಾಲಪ್ಪ ತನ್ನ ಕುಲುಮೆ ಕೆಲಸದ ಜೊತೆಗೆ ಊರಮುಂದೆ ಇರುವ ತಮ್ಮ ಹೊಲದಲ್ಲಿ ಬೇಸಾಯ ಮಾಡುತ್ತಾ ಬಂದಿದ್ದು, ಸುಮಾರು ಇಪ್ಪತ್ತು ವರ್ಷಗಳ ಹಿಂದೆ ತಮ್ಮ ಹೊಲದಲ್ಲಿ ಉತ್ತಮವಾಗಿ ಬೆಳೆದು ನಿಂತಿದ್ದ ಸೂರ್ಯಕಾಂತಿ ಬೆಳೆ, ಮಳೆ ಇಲ್ಲದೇ ಒಣಗುವ ಸ್ಥಿತಿಗೆ ಬಂದಿತ್ತು. ಅದೇ ಸಮಯಕ್ಕೆ ನೀರಿಗೆ ಆಧಾರವಾಗಿದ್ದ ಅವರ ಹೊಲದ 50 ಅಡಿಯ ಬಾವಿ ನೀರಿಲ್ಲದೆ ಪೂರ್ಣ ಬತ್ತಿತ್ತು, ಬೇರೆ ವಿಧಿ ಇಲ್ಲದೇ ಬೆಳೆ ಉಳಿಸಿಕೊಳ್ಳಲು ಸಾಲ ಮಾಡಿ, ಬತ್ತಿದ ಬಾವಿಯಲ್ಲೇ ಎರಡ್ಮೂರು ಕೊಳವೆ ಬಾವಿ ಹಾಕಿಸಿದ ಬಾಲಪ್ಪ ಹನಿ ನೀರೂ ದಕ್ಕದೆ ಕಂಗಾಲಾದರು.

ಈ ಪರಿಸ್ಥಿತಿಯೇ ಬಾಲಪ್ಪನಲ್ಲಿ ಪ್ರತಿ ಬಾರಿ ಮಳೆಯಾದಾಗಲೂ, ಊರ ಮನೆಗಳ ಛಾವಣಿಯಿಂದ ಬಿದ್ದು, ತಮ್ಮ ಹೊಲದ ಬಳಿಯೇ ಹರಿದು ವ್ಯರ್ಥವಾಗಿ ಹಳ್ಳ ಸೇರುತ್ತಿದ್ದ ನೀರನ್ನು, ತಮ್ಮ ಬತ್ತಿದ ಬಾವಿಗೆ ಹರಿಸುವ ಯೋಚನೆ ಮಾಡಿಸಿತು. ಆ ವರ್ಷ ಯಾವುದೋ ಒಂದು ಮಳೆ ರಭಸವಾಗಿ ಸುರಿದಾಗ ತನ್ನ ಕುಟುಂಬದವರೊಂದಿಗೆ ಸೇರಿ ಹರಿಯುವ ನೀರಿಗೆ ಅಡ್ಡಗಟ್ಟೆ ಹಾಕಿ, ಕಲ್ಲಿನ ಕಾಲುವೆ ಮೂಲಕ ಬಾವಿಗೆ ನೀರನ್ನು ಧುಮುಕಿಸುವುದರೊಂದಿಗೆ ಆರಂಭವಾದ ಮಳೆಕೊಯ್ಲಿನ ಕಾಯಕ ಇಲ್ಲಿಯವರೆಗೆ ಸಾಗಿಬಂದಿದೆ 'ಒಂದು ಉತ್ತಮ ಮಳೆಯಾದರೆ ಈ ಬಾವಿ ತುಂಬಿ ಒಂದು ಉತ್ತಮ ಫಸಲು ಬರುವುದು ಗ್ಯಾರಂಟಿ' ಎನ್ನುತ್ತಾರೆ ಬಾಲಪ್ಪ. ಇವರ ಈ ಕಾರ್ಯದಿಂದ ಸುತ್ತಲಿನ ಕೊಳವೆ ಬಾವಿಗಳು ಪುನಶ್ಚೇತನಗೊಂಡಿವೆ, ಅಲ್ಲದೇ ಊರ ಅನೇಕರು ತಮ್ಮ ಹೊಲದ ಬಳಿ ವ್ಯರ್ಥವಾಗಿ ಹರಿದುಹೋಗುವ ಮಳೆನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಮುಂದಾಗಲು ಸ್ಫೂರ್ತಿಯಾಗಿರುವ, ಏನೂ ಅರಿಯದ ಬಾಲಪ್ಪನದು ಆದರ್ಶ ಕಾರ್ಯವೇ ಸರಿ.

ಮೆಟ್ಟುಗೊಪ್ಪಲಿಯ ಬೆಟ್ಟಪ್ಪ

ಸುಮಾರು ಹನ್ನೆರಡು ವರ್ಷಗಳಿಂದ ಶ್ರಮಾಧಾರಿತ 'ಮೆಟ್ಟುಗೊಪ್ಪಲಿ ನೀರಾವರಿ' ತಂತ್ರ ಬಳಸಿಕೊಂಡು ಕೃಷಿಯಲ್ಲಿ ತೊಡಗಿರುವ ಕೊಪ್ಪಳ ಜಿಲ್ಲೆಯ ಇಂದರಗಿ ಗ್ರಾಮದ ಬೆಟ್ಟಪ್ಪಜ್ಜ, ತನಗರಿವಿಲ್ಲದೇ ಅಂತರ್ಜಲದ ಸುಸ್ಥಿರ ಬಳಕೆಯ ಮೂಲಕ ಜಲಸಾಕ್ಷರರಾಗಿದ್ದಾರೆ. ಕಡು ಬಡತನದಲ್ಲಿ ಬೆಳೆದು ಬಂದಿರುವ ಅರವತ್ತು ವರ್ಷದ ಬೆಟ್ಟಪ್ಪನವರಿಗೆ ಅನಿಶ್ಚಿತ ಮಳೆಯಿಂದಾಗಿ ಮಳೆಯನ್ನು ನಂಬಿ ಕೃಷಿ ಮಾಡುವುದು ಕಷ್ಟವಾಯಿತು. ಪರಿಹಾರವಾಗಿ ಗುಡ್ಡರಾಶಿಯ ನಡುವೆ ಇರುವ ತನ್ನ ಹೊಲದ ಬದುವಿನಲ್ಲಿ 10 ಅಡಿ ಉದ್ದ, 5 ಅಡಿ ಅಗಲ, 15 ಅಡಿ ಆಳದ ಚಿಕ್ಕ ತೋಡು ಬಾವಿ ತೆಗೆದು ಅದರ ಒರತೆಯ ನೀರನ್ನು ಸಾಮಾನ್ಯವಾಗಿ ಇಂದು ನಾವೆಲ್ಲ ಮರೆತೆ ಬಿಟ್ಟಿರುವ ಕೊಪ್ಪಲಿಯಿಂದ ನೀರು ಎತ್ತುವ (ಮೆಟ್ಟಿಗೊಪ್ಪಲಿ / ಏತ) ತಂತ್ರ ಬಳಸಿ, ಹೊಲಕ್ಕೆ ನೀರು ಹರಿಸಿ ಬೇಸಾಯ ಮಾಡುತ್ತಾ ಬಂದಿದ್ದಾರೆ. ತಮ್ಮ ಈ ಪದ್ಧತಿಯಿಂದಲೇ ಸುಮಾರು 12 ವರ್ಷದಿಂದ ತಮ್ಮ 2 ಎಕರೆ ಹೊಲದಲ್ಲಿ ಭತ್ತ, ಸೂರ್ಯಕಾಂತಿ, ಜೋಳ, ಶೇಂಗಾ ಹಾಗು ವಿವಿಧ ಕಾಯಿಪಲ್ಲೆಗಳನ್ನು ಬೆಳೆಯುತ್ತಾ ಬಂದು ಸ್ವಾವಲಂಬಿಯಾಗಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ಅಷ್ಟೇ ಅಲ್ಲದೆ, ತಮ್ಮ ತೋಡು ಬಾವಿಯಲ್ಲಿ ನೀರಿನ ಒರತೆಯನ್ನು ಜೀವಂತವಾಗಿಡಲು ಗುಡ್ಡದ ನಾನಾಕಡೆ ಮಳೆನೀರಿನ ಇಂಗು ಗುಂಡಿ ನಿರ್ಮಿಸಿರುವ ಬೆಟ್ಟಪ್ಪಜ್ಜನ ನೀರು ಬಳಕೆಯ ಪದ್ಧತಿ ಇತರರಿಗೆ ಮಾದರಿಯಾಗಿದೆ.

ಜಲ ಮರುಪೂರಣದ ಕೊಂಬಳಿ

ಶ್ರೀ ಚನ್ನಬಸಪ್ಪ ಶಿವಪ್ಪ ಕೊಂಬಳಿಯವರು ಹಾವೇರಿ ಜಿಲ್ಲೆಯ ಕಾಕೋಳು ಗ್ರಾಮದ ಉತ್ಸಾಹಿ ಕೃಷಿಕರು. ಇವರು ಕಪ್ಪಲಿಬಾವಿ ಮಾಡಿಕೊಂಡು ಎಲೆಬಳ್ಳಿ, ಉಳ್ಳಾಗಡ್ಡಿ ಹಾಗೂ ಕಂಪೆನಿಯ ತರಕಾರಿ/ಧಾನ್ಯದ ಬೀಜಗಳನ್ನು ಬೆಳೆಸಿ ಅಧಿಕ ಲಾಭ ಗಳಿಸುತ್ತಿದ್ದರು. ಗ್ರಾಮದಲ್ಲಿ ಅಂತರ್ಜಲದ ಪರಿಸ್ಥಿತಿ ಬದಲಾಗಿ ಕೃಷಿ ಕಷ್ಟಕರವಾಯಿತು. ತಮ್ಮ ಗ್ರಾಮದ ಅಂತರ್ಜಲ ವೃದ್ಧಿಗೆ ಆಲೋಚಿಸಿ ಪ್ರಥಮವಾಗಿ ತಮ್ಮ ಜಮೀನಿನಲ್ಲೇ ಮಳೆಕೊಯ್ಲನ್ನು ಬಾವಿಗೆ ನೇರ ಮರುಪೂರಣ ಮಾಡಿದರು. ಸ್ವಂತ ಖರ್ಚಿನಲ್ಲಿ ಗ್ರಾಮದ 22 ಬಾವಿಗಳಿಗೆ ಮಳೆಕೊಯ್ಲಿನ ಅಂತರ್ಜಲ ಮರುಪೂರಣ ವ್ಯವಸ್ಥೆ ಮಾಡಿದರು. ಇವರ ಉದ್ದೇಶ ಮತ್ತು ಅವಶ್ಯಕತೆಯನ್ನು ತಿಳಿದ ಗ್ರಾಮದ ಜನರು ಸಂಘಟಿತರಾಗಿ ನೈಸರ್ಗಿಕ ಜಲ ಸಂಪನ್ಮೂಲ ಅಭಿವೃದ್ಧಿ ಸಂಘವನ್ನು ರಚಿಸಿಕೊಂಡರು. ಈ ಸಂಸ್ಥೆಯ ಮೂಲಕ ಗ್ರಾಮದ 2000 ಎಕರೆ ಪ್ರದೇಶದ ವ್ಯಾಪ್ತಿಯಲ್ಲಿ 80 ತೆರೆದ ಬಾವಿ ಹಾಗೂ 85 ಕೊಳವೆ ಬಾವಿಗೆ ಮಳೆಕೊಯ್ಲಿನ ಜಲಮರುಪೂರಣ ಮಾಡಿದ್ದಾರೆ. ಈ ಪ್ರಯತ್ನವನ್ನು ಇನ್ನೂ 150 ಬಾವಿಗೆ ವಿಸ್ತರಿಸಬೇಕೆಂದು ಆಲೋಚಿಸಿರುವುದು ಪ್ರಶಂಸಾರ್ಹ. ಇವರ ಈ ಸಂಘಟಿತ ಜಾಗೃತಿ ನೆರೆಹೊರೆಯ ಗ್ರಾಮಗಳಿಗೆ ಮಾದರಿಯಾಗಿದೆ. ಈ ಜಾಗೃತಿಯನ್ನು ಮುಂದೆ ಕೊಂಡೊಯ್ಯುವಲ್ಲಿ ಈ ಪ್ರದೇಶದ ಹಲವು ಶಾಲೆಗಳಲ್ಲಿ, ಇವರು ಮಳೆಕೊಯ್ಲಿನ ಜಲಮರುಪೂರಣ ಶಿಕ್ಷಣವನ್ನು ನೀಡುತ್ತಿದ್ದಾರೆ.

ಪ್ರತಿಕ್ರಿಯೆ

ಪ್ರಿಯ ಡಾ. ಪ್ರಕಾಶ್ ಕಮ್ಮರಡಿ

'ಹಿತ್ತಲಗಿಡ'ದ ಸಾಗುವಳಿಯನ್ನು ಹತ್ತು ವರ್ಷದಿಂದ ಯಶಸ್ವಿಯಾಗಿ ಮಾಡುತ್ತಾ ಬಂದಿದ್ದೀರಿ. ಫಸಲೂ ಸೊಂಪಾಗಿದೆ. (ಕೊಯ್ಲು ನಿಮಗೆ ಹೇಗಾಗುತ್ತಿದೆಯೋ ಗೊತ್ತಿಲ್ಲ). ಹೀಗೆಯೇ ಸಾಗುವಳಿ ಮುಂದುವರೆಯಲಿ ಎಂದು ಆಶಿಸುತ್ತಾ ಈ ಸಂದರ್ಭದಲ್ಲಿ ನಿಮಗೆ ಶುಭ ಹಾರೈಸುತ್ತೇನೆ.

ಟಿಕೂಚುಭಟ್ಟಟಿ ವಿಭಾಗದಲ್ಲಿ ಪ್ರಸ್ತಾಪಿಸುವ–ಪರಿಚಯಿಸುವ ಪುಸ್ತಕದ ಪ್ರಕಾಶಕರ ವಿಳಾಸವನ್ನೂ ಪ್ರಕಟಿಸಿ. ಸಾಮಾನ್ಯವಾಗಿ ಪುಸ್ತಕದ ಅಂಗಡಿಗಳಲ್ಲಿ ಸಿಗದ ಈ ಪುಸ್ತಕಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವವರಿಗೆ ಅನುಕೂಲವಾಗುತ್ತದೆ.

ಗಿರೀಶ್ ಕಾಸರವಳ್ಳಿ, ಚಲನಚಿತ್ರ ನಿರ್ದೇಶಕರು, ಬೆಂಗಳೂರು

ಮಾನ್ಯರೆ, 'ಹಿತ್ತಲಗಿಡ'ಪತ್ರಿಕೆಗೆ ಹತ್ತು ವರ್ಷ ತುಂಬಿದೆ ಎಂಬುದು ತುಂಬಾ ಸಂತೋಷ. ಮುಂದೆ ತಿಂಗಳಿಗೊಂದು ಪತ್ರಿಕೆಯಾಗಿ ಪ್ರಕಟವಾಗಲೆಂದು ಶುಭ ಹಾರೈಕೆ. ಪತ್ರಿಕೆಯಲ್ಲಿನ ಹೊಸ ಹೊಸ ವಿಚಾರಗಳ ಬರವಣಿಗೆಗಳು ರೈತರ ಕೃಷಿಯ ಆಸಕ್ತಿಯನ್ನು ಹೆಚ್ಚಿಸಿ, ಉತ್ತಮ ಇಳುವರಿಯನ್ನು ಪಡೆಯಲು ಸಹಕಾರಿಯಾಗಿವೆ. ಹಾಗೆಯೇ ದೇಶೀಯ ಹತೋಟಿ, ದೇಶೀಯ ಜಾಣ್ಮೆ, ದೇಶೀಯ ತಂತ್ರಜ್ಞಾನವು ರೈತರಿಗೆ ಉಪಯುಕ್ತವಾಗಿವೆ. ವಿಶೇಷ ವ್ಯಕ್ತಿಗಳ ಪರಿಚಯ, ಕೃಷಿ ನೀತಿ ನಿಯಮಗಳ ಪರಿಚಯ ಅಂಕಣಗಳು ರೈತರಿಗೆ ದಾರಿ ದೀಪ. ಟಿಪ್ರತಿಕ್ರಿಯೆಟಿ ಅಂಕಣ ರೈತರ, ಓದುಗರ ಅಭಿಪ್ರಾಯಕ್ಕೆ ಸುಲಭ ಸಾಧ್ಯದ ಮಾರ್ಗ. ಒಟ್ಟಿನಲ್ಲಿ ಈ ಪತ್ರಿಕೆ ರೈತರ ಆಶಾಭಾವನೆಗಳಿಗೆ ಸ್ಪಂದಿಸಿ, ಸಹಕರಿಸಿ ಇದೇ ರೀತಿ ಮುಂದುವರೆಯಲಿ ಎಂಬುದೇ ನನ್ನ ಅನಿಸಿಕೆ.

ಹೆಚ್.ಕೆ. ಯಶೋದ, ಮದಗ್ರಾಮ, ಮಡಿಕೇರಿ

ಪ್ರಕಾಶ್‌ಜೀ,

ಹಿತ್ತಲಗಿಡದಂತಹ ಪತ್ರಿಕೆಯನ್ನು 10 ವರ್ಷಕಾಲ ನಡೆಸುವುದು ಸುಲಭದ ಕೆಲಸವಲ್ಲ. ನೈಜ ಕಳಕಳಿ ಇದ್ದರೆ ಮಾತ್ರ ಸಾಧ್ಯ. ನಿಮ್ಮ ಸಾಹಸಕ್ಕೆ ಅಭಿನಂದನೆಗಳು. ಅನುಶೋಧನೆಗಳ ಮಾಹಿತಿಯೊಂದಿಗೆ ಅನುಶೋಧಕರ ವಿಳಾಸ ನೀಡಿದರೆ ಆಸಕ್ತರಿಗೆ ಅವರನ್ನು ಸಂಪರ್ಕಿಸಲು ಅನುಕೂಲ.

ಸುದರ್ಶನ, ಅಡಿಕೆ ಪತ್ರಿಕೆ

ಹಿತ್ತಲಗಿಡ ಮೇ–ಡಿಸೆಂಬರ್ 2004 ಸಂಚಿಕೆ ಓದಿ ಈ ಪತ್ರಿಕೆಯ ಬಗೆಗಿದ್ದ ಅಭಿಮಾನ ಇಮ್ಮಡಿಸಿತು. ಕೃಷಿಕರ ಅನುಶೋಧನೆಗೆ ಪತ್ರಿಕೆ ನೀಡುತ್ತಿರುವ ಬೆಂಬಲ, ಪ್ರೋತ್ಸಾಹ ಮೆಚ್ಚುವಂತಹದ್ದು.

ಶೈಲಜಾ ಬೆಳ್ಳಂಕಿಮಠ, ಗೋಕಾಕ್

ಮಾನ್ಯ ಡಾ. ಪ್ರಕಾಶ್ ಕಮ್ಮರಡಿ,

ನಿಮ್ಮ ಹಿತ್ತಲಗಿಡ ಪುಸ್ತಕ ನಿಜಕ್ಕೂ ಬಹಳ ಉಪಯೋಗವಾದದ್ದು. ನಾನು ಹಿಂದಿನ ಸಂಚಿಕೆಗಳಿಂದ ಉಪಯೋಗ ಪಡೆದಿದ್ದೇನೆ. ಹತ್ತು ವರ್ಷಕ್ಕೆ ಕಾಲಿಡುತ್ತಿರುವುದಕ್ಕೆ ಶುಭ ಹಾರೈಕೆಗಳು.

ವಿ.ಎಸ್ ಕೃಷ್ಣ ಅಯ್ಯರ್,
ಮಾಜಿ ಲೋಕ ಸಭಾ ಸದಸ್ಯರು, ಬೆಂಗಳೂರು

ಹಿತ್ತಲಗಿಡ ಹತ್ತುವರ್ಷಕ್ಕೆ ಕಾಲಿಟ್ಟಿರುವುದಕ್ಕೆ ಅಭಿನಂದನೆಗಳು.

ಡಾ. ಮೃತ್ಯುಂಜಯ, ಹಿರಿಯ ವಿಜ್ಞಾನಿ ಮತ್ತು ಡಿಡಿಜಿ ಕೃಷಿ ಅನುಸಂದಾನ ಸಂಸ್ಥೆ,
ಹೊಸ ದೆಹಲಿ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *'ಸಂಪಾದಕರು, ಹಿತ್ತಲಗಿಡ, ಬೆಂಗಳೂರು'* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ನಾಲ್ಕನೇ ಮತ್ತು ಐದನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ **1,00,000** ಮೊದಲ ಬಹುಮಾನ, ರೂಪಾಯಿ **50,000** ಹಾಗೂ ರೂಪಾಯಿ **25,000**, **2**ನೇ ಮತ್ತು **3**ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ **7,500** ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ **7,500** ಸಾಂತ್ವಾನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ನಾಲ್ಕನೆಯ ಸ್ಪರ್ಧೆಗೆ ಡಿಸೆಂಬರ್ **2004** ಮತ್ತು ಐದನೇ ಸ್ಪರ್ಧೆಗೆ ಡಿಸೆಂಬರ್ **2005**ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು 'ಪೂರ್ವ ಸೂಚಿತ ಸಮ್ಮತಿ' **(Prior Informed Consent)** ಪಡೆದ ನಂತರವೇ ಮುಂದುವರೆಯಲಾಗುವುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

....

....

....

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು – 560 065
Ph: 080-23620025 (ರ)
email: hittalu@bgl.vsnl.net.in